# ಹ , ಹಾ. ,ಹಿ , ಹೆ , ಹೊ , ಅಕ್ಷರದ ವಚನದ ಅರ್ಥ

1) ಹಿಂದಣ ಹಳ್ಳ ಮುಂದಣ ತೊರೆ
ಸಲ್ಲುವ ಪರಿ ಎಂತು ಹೇಳಾ.?
ಹಿಂದಣ ಕೆರೆ ಮುಂದಣ ಬಲೆ
ಹದುಳ ವಿನ್ನೆಲ್ಲಿಯದು ಹೇಳಾ?
ನೀನಿಕ್ಕಿದ ಮಾಯೆ ಕೊಲುತ್ತಿಪ್ಪುದು
ಕಾಯಯ್ಯ ಕಾಯಯ್ಯ ಚೆನ್ನಮಲ್ಲಿಕಾರ್ಜುನಾ.

### ಪದಗಳ ಅರ್ಥ

ಹಳ್ಳ-ನೆರೆ, ಪ್ರವಾಹ. ತೊರೆಗಿಂತ ಸಣ್ಣದು. ಕಾಲುವೆಗಿಂತ ದೊಡ್ಡದು.
ಸಲ್ಲು--ಯೋಗ್ಯವಾಗು,
ಪರಿ-ದಾರಿ
ಹದುಳ-ಕ್ಷೇಮ, ಸಮಾಧಾನ.
ಕಾಯಯ್ಯ,---ಕಾಪಾಡು

### ವಚನದ ಅರ್ಥ

ಇದುವರೆಗೆ ಆಕ್ಕಮಹಾದೇವಿಯವರು ಮಾಯೆಯ ಕಾಡಾಟಕ್ಕೆ ಸಿಕ್ಕಿದ ವಿವರ ನೋಡಿದೆವು. ಮೇಲಿನ ವಚನವು ಮಾಯೆಯ ಹೊಡೆತಕ್ಕೆ ಬಹಳವಾಗಿ ಸಿಕ್ಕಿಬಿದ್ದ ಸಂದರ್ಭದ ವಚನ . ರಾಜ ಕೌಶಿಕ ಲಗ್ನವಾಗಬಯಸಿ ಮಹಾದೇವಿಯವರನ್ನು ಒತ್ತಯದಿಂದ ತಂದೆತಾಯಿಗಳ ಸಮೇತ ಕರೆತರಿಸಿ ಪ್ರಾಣ ಬೆದರಿಕೆ ಒಡ್ಡಿ ಬಂಧನದಲ್ಲಿಟ್ಟ ಸಂದರ್ಭದ ವಚನ ಇದು. ಮಹಾದೇವಿಯವರಿಗೆ ಪರಮಾತ್ಮನ ಹಂಬಲ. ರಾಜನಿಗೆ ಭೋಗದ ಇಚ್ಛಾ. ಈ ದುಷ್ಟ ರಾಜನ ಕಪಿಮುಷ್ಟಿಯಿಂದ ಪಾರಾ ಗುವದಾರಿ ಯಾವುದು?ದಾರಿ ತೋರದೆ ಅಸಹಾಯಕರಾಗಿ ಪರಮಾತ್ಮನಲ್ಲಿ ಮೊರೆಯಿಡುತ್ತಿರುವ ವಚನ ಇದು.

ಹಿಂದಣ ಹಳ್ಳ ಮುಂದಣ ತೊರೆ ಸಲ್ಲುವ ಪರಿ ಎಂತು ಹೇಳಾ?ಅವರ ದು:ಖದ ಸ್ಥಿತಿಯನ್ನು ಚಿತ್ರಿಸಲು ಎರಡು ಸುಂದರ ದೃಷ್ಟಾಂತಗಳನ್ನು ಕೊಟ್ಟಿದ್ದಾರೆ.ಅವರ ಜೀವನ ಈಗ ತುಂಬ ಕಳವಳಕಾರಿಯಾದ ಸ್ಥಿತಿಯಲ್ಲಿದೆ. ಮೊದಲ ದೃಷ್ಟಾಂತ ಅಕ್ಕನವರು ಮುಂದೆ ಹೊರಟಿದ್ದಾರೆ.ಮುಂದೆ ಒಂದು ದೊಡ್ಡ ತೊರೆ ಬಂದು ಬಿಟ್ಟಿತು. ಪ್ರವಾಹ ನಿಂತ ಸ್ಥಳವನ್ನು ಆವರಿಸುತ್ತಿದೆ. ಹೋಗಲಿ ಹಿಂದೆ ಹೋಗೋಣ ಎಂದರೆ ಬಂದ ದಾರಿಯಲ್ಲಿ ಒಂದು ದೊಡ್ಡ ಹಳ್ಳ ಬಂದು ಬಿಟ್ಟಿದೆ. ಹಿಂದೆಯೂ ಹೋಗುವಂತಿಲ್ಲ. ಮುಂದೆಯೂ ಹೋಗುವಂತಿಲ್ಲ. ಇದ್ದಲ್ಲಿಯೂ ಇರುವಂತಿಲ್ಲ. ಈ ಆತಂಕದ ಸ್ಥಿತಿ ಮಹಾದೇವಿಯವರದಾಗಿದೆ. ಹಿಂದಣ ಕೆರೆಮುಂದಣ ಬಲೆ ಹದುಳವಿನ್ನೆಲ್ಲಿಯದು ಹೇಳಾ? ಹಿಂದೆ ಕೆರೆ ಇದೆ . ಮುಂದೆ ಬಲೆ ಇದೆ ಮೀನು ಹಿಡಿಯುವವರು ಕೆರೆಯಲ್ಲಿಬಲೆ

ಬೀಸಿ ಕೆರೆಯನೀರನ್ನು ಬಡಿಯುತ್ತ ಸಪ್ಪಳ ಮಾಡುತ್ತ ಬರುತ್ತಾರೆ. ಮೀನುಗಳು ಜಾಲಗಾರರ ಈ ಸಪ್ಪಳಕ್ಕೆ ಹೆದರಿ ಮುಂದೆ ಹೋಗುತ್ತವೆ. ಆದರೆ ಮುಂದೆ ಬಲೆಯೊಡ್ಡಿ ರಿವುದರಿಂದ ಮೀನುಗಳು ಹೆದರಿ ಅತ್ತ ಓಡಿಹೋಗಿ ಆ ಬಲೆಯಲ್ಲಿ ಸಿಕ್ಕಿ ಬೀಳುತ್ತವೆ. ಅಲ್ಲಿಗೆ ಅವುಗಳ ಜೀವನ ಮುಗಿಯಿತು. ಹಾಗೆಯೆ ಮನುಷ್ಯರು ಪರಮಾತ್ಮ ತೋರುವ ಬಲೆಯಲ್ಲಿ ಸಿಕ್ಕಿಬೀಳುತ್ತಾರೆ ಭವಸಾಗರಕ್ಕೆ ಹೆದರಿ ಸಾಧಕ ಮುಂದೆ ಹೋಗುತ್ತಾನೆ .ಆದರೆ ಮುಂದೆ ಆಶೆ ಅಮಿಷಗಳ ಬಲೆಯೊಡ್ಡಿ ಸಾಧಕ ಈ ಬಲಯಲ್ಲಿ ಬೀಳುವಂತೆ ಮಾಡಿಬಿಡುತ್ತಾನೆ. ನೀನಿಕ್ಕಿದ ಮಾಯೆ ಕೊಲುತ್ತಿಪ್ಪುದು. ನೀನು ಒಡ್ಡಿರುವ ಈ ಮಾಯೆ ಮನುಷ್ಯನನನ್ನು ಇದ್ದಾಗಲೂ ಸತ್ತು ಹುಟ್ಟುವಂತೆ ಮಾಡುತ್ತದೆ. ಕಾಲವಾದಾಗಲೂ ಭವಭವದಲ್ಲಿ ಕೊಂದು ಕೂಗುತ್ತಿದೆ ಈಭವ, ಆಶೆ ಆಮಿಷಗಳು ಅಜೇಯವಾಗಿಯೆ ಉಳಿದುಬಿಡುತ್ತವೆ. ಇಂತಹ ಸ್ಥಿತಿಯಲ್ಲಿ ಆತ್ಮನಿಗೆ ಕ್ಷೇಮವೆಲ್ಲಿಯದು? ಹಿಂದಣ ಕೆರೆ ಮುಂದಣ ಬಲೆಹದುಳ ಇನ್ನೆಲ್ಲಿಯದು ಹೇಳಾ?ಇನ್ನೊಂದು ಅಂಥದೇ ಸುಂದರ ದೃಷ್ಟಾಂತ ಕೊಟ್ಟಿದ್ದಾರೆ. ಮುಂದೆ ಹೋಗ ಬೇಕೆಂದರೆ ಕೆರೆ, ಹಿಂದೆ ಹೋಗಬೇಕೆಂದರೆ ಬಲೆ. ಇನ್ನು ಕ್ಷೇಮದಿಂದ ಪ್ರಾಗಿ ಉಳಿಯುವುದಾದರೂ ಹೇಗೆ? ಅಕ್ಕಮಹಾದೇವಿಯವರ ಶ್ರೇಷ್ಠತೆ ಉನ್ನತಿ ವ್ಯಕ್ತ ವಾಗುವುದೇ ಇಲ್ಲಿ. ಲೋಕದ ಪ್ರತಿಯೊಂದು ಹೆಣ್ಣುತಾನು ಮದುವೆಯಾಗಬೇ ಕೆಂದು ಧೀರ, ಶೂರ,ಸುಂದರ, ತರುಣ, ಶ್ರೀಮಂತ ಬೇಕೆಂದು ಬಯಸುತ್ತಾರೆ. ಅಕ್ಷ ಮಹಾದೇವಿಯವರಿಗೆ ಶ್ರೇಷ್ಠರಾಜನೇ ಲಗ್ನವಾಗಲು ಬಂದಾಗ ಅದನ್ನು ನಿರಾಕರಿಸಿ ಪರಮಾತ್ಮನೇ ನನಗೆ ಬೇಕೆಂದು

ಹಂಬಲಿಸುತ್ತಾರೆ. ಈ ರಾಜನು ಹೊಯ್ಸಳ ವಿಷ್ಣುವರ್ಧನನ್ನು ಎರಡು ಸಲ ಯುದ್ಧದಲ್ಲಿ ಸೋಲಿಸಿದ ಮಹಾ ಪರಾಕ್ರಮಿ. ಒಂದು ಸಲವಂತೂ ಆತನನ್ನು ಎಳೆತಂದು ಅವನನ್ನು ಬಿಜ್ಜಳನ ಮಂಚದ ಕಾಲಿಗೆ ಕಟ್ಟಿದ್ದನು. ಇಂಥಹ ಧೀರನನ್ನೂ ನಿರಾಕರಿಸ ಬೇಕಾದರೆ ಅಕ್ಕನವರ ವೈರಾಗ್ಯ, ಕೆಚ್ಚು ಅದೆಷ್ಟಿರ ಬೇಕು. ಇಷ್ಟೊಂದು ವೀರವೈರಾಗ್ಯವು ಪುರುಷರಲ್ಲಿಯೂ ದುರ್ಲಭ.

ನೀನಿಕ್ಕಿದ ಮಾಯೆ ಕೊಲುತಿಪ್ಪುದು ಕಾಯಯ್ಯ ಚೆನ್ನಮಲ್ಲಿಕಾರ್ಜುನ. ಅರಮನೆಯ ಭೋಗ,ವಿಲಾಸ,ಸಂಪತ್ತೆಲ್ಲವನ್ನೂ ಮಾಯೆ ಎಂದು ಕರೆದ ಧೀರ ವೈರಾಗ್ಯ ಅಕ್ಕಮಹಾದೇವಿಯವರದು. ಸಾಮಾನ್ಯರಾದವರಿಗೆ ಈ ದೃಷ್ಟಿ ಬರುವುದಿಲ್ಲ. ಅಕ್ಕ ನವರ ಮನೋಬಲ ತುಂಬ ದೊಡ್ಡದು. ಈಮಾಯೆ ನನ್ನನ್ನು ಕೊಲ್ಲುತ್ತಿದೆ ಎಂದು ಮೊರೆಯಿಟ್ಟಿದ್ದಾರೆ. ನಾವು ದೇವರಲ್ಲಿ ಕೊಡು ಕೊಡುಎಂದು ಸುಖ, ಭೋಗಗಳನ್ನು ಬೇಡುತ್ತೇವೆ. ಆದನ್ನು ಅಕ್ಕನವರು ಮಾಯೆ ಎಂದು ಜರಿದಿದ್ದಾರೆ. ವೈರಾಗ್ಯ ತುಂಬದೊಡ್ಡದು.

2) ಹುಟ್ಟಿದ ಯೋನಿಯಲ್ಲಿ ಹುಟ್ಟಿಸಿ ಬಾರದ ಭವಂಗಳಲಿ ಬರಿಸಿ
ಉಣ್ಣ ದ ಊಟವನುಣಿಸಿ ವಿಧಿಗೊಳಗಾಗಿಸುವ ಕೇಳಿರಣ್ಣ
ತನ್ನವರೆಂದರೆ ಮನ್ನಸುವನೆ ಶಿವನು ?
ಹತ್ತಿರಿದ್ದ ಭೃಂಗಿಯ ಚರ್ಮವ ಕಿತ್ತೀಡಾಡಿಸಿದನು.
ಮತ್ತೆ ಕೆಲಬಲರ ಬಲ್ಲನೆ ? ಇದನರಿತು ಬಿಡದಿರು.
ಚೆನ್ನಮಲ್ಲಿಕಾರ್ಜುನ ಇಂತಹ ಸಿತಗನವ್ವ.

ವಚನದ ಅರ್ಥ

ಹುಟ್ಟಿದ ಯೋನಿ-ಹುಟ್ಟಬಾರದ ಜನ್ಮಗಳು.
ಬಾರದ ಭವ -ಬರಬಾರದ ಜನ್ಮ,
ಉಣ್ಣದ ಊಟ-ಊಟಮಾಡಲುಬಾರದ ಊಟ.ಅಪಾರ ದು:ಖ,ವಿಧಿ,ಕರ್ಮ.
ಮನ್ನಿಸು- ಕ್ಷಮಿಸು,
ಈಡಾಡಿಸು-ಶಿಕ್ಷಿಸು
ಸಿತಗ-ನಿರ್ದಾಕ್ಷಿಣ್ಯ,ನಿರ್ದಯ ಮನಸ್ಸಿನವ

### ವಚನದ ಅರ್ಥ

ಹುಟ್ಟದ ಯೋನಿಯಲ್ಲಿ ಹುಟ್ಟಿಸಿ ಬಾರದ ಭವಂಗಳಲ್ಲಿಬರಿಸಿ-
ಹುಟ್ಟಬಾರದ ಜನ್ಮಗಳಲ್ಲಿ ಹುಟ್ಟಿಸಿ ಬರಬಾರದಂತಹ
ಜನ್ಮಗಳಲ್ಲೆಲ್ಲ ತಂದು ನಮ್ಮನ್ನು ದಂಡಿ
ಉಣಿಸಿ ನಮ್ಮನ್ನು ವಿಧಿಯ ಹಂಗಿನಲ್ಲಿರಿಸುತ್ತಾನೆ. ತನ್ನವರೆಂದರೆ
ಮನ್ನಿಸುವನೆ ಶಿವನು? ಪರಮಾತ್ಮನು ಶಿಕ್ಷಿಸುವಾಗ ತನ್ನವರು
ಪರರು ಎಂದು ಪಕ್ಷಪಾತ ಮಾಡುವುದಿಲ್ಲ. ಹತ್ತಿರಿರ್ದ ಬೃಂಗಿಯ
ಚರ್ಮವ ಕಿತ್ತೀಡಾಡಿಸಿದನು. ಹತ್ತಿರವೇ ಇದ್ದ ಭೃಂಗಿಯ
ಚರ್ಮವನ್ನು ಸುಲಿಸಿದನು. ಭೃಂಗಿ ಶಿವನ ಗಣಧರರಲ್ಲಿ ಒಬ್ಬ.
ಭೃಂಗಿಗೆ ತನಗಿಂತ ಶ್ರೇಷ್ಠ ಭಕ್ತರಾರೂ ಇಲ್ಲವೆಂಬ ಭಾವನೆ ಬಂತು.
ಅಹಂಕಾರ ನಾಶಕ್ಕಾಗಿ ಭೃಂಗಿಯ ಚರ್ಮ ಸುಲಿಸಿದನು.
ತನ್ನಭಕ್ತನೂ ನಿತ್ಯದ ಪರಿಚಾರಕನೂ ಆದ ಭೃಂಗಿಯನ್ನೂ
ಬಿಡಲಿಲ್ಲ.ಆತ ಎಂತಹ ಸಿತಗ ಎಂದರೆ ನಿರ್ದಾಕ್ಷಿಣ್ಯ
ಮನೋಭಾವದವನು. ಆದುದರಿಂದ ಶ್ರದ್ಧೆ ಭಕ್ತಿ ಅನನ್ಯ
ಶರಣಾಗತಿ ನಮಗೆ ಬೇಕು. ಪರಮವಿರಾಗಿಯಾದ
ಮಹಾದೇವಿಯಕ್ಕನವರಿಂದ ಸಾಧಕಿಯರು, ಭಕ್ತರು
ಉಪದೇಶಾಮೃತ ಕೇಳಲು ಬಯಸಿದಾಗ ಈಪುರಾಣದ ಕತೆಯನ್ನು
ಉದಾಹರಿಸಿದ್ದಾರೆ. ಸಾಧಕನಾದವನು ಅಹಂಕಾರವಿಲ್ಲದೆ,
ವಿವೇಕಿಯೂ ಸದ್ಭಕ್ತಿವುಳ್ಳವನು ಆಗಿರಬೇಕೆಂದು ತಿಳಿಸಿದ್ದಾರೆ.

3) ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ.
ಬಂಧನಕ್ಕೆ ಬಂದ ಗಿಳಿಯು ತನ್ನ
ಬಂಧುವ ನೆನೆವಂತೆ ನೆನೆವೆನಯ್ಯ.
ಕಂದ ನೀನಿತ್ತ ಬಾರೆಂದು ನೀವು ನಿಮ್ಮಂದವ ತೋರಯ್ಯ
ಚೆನ್ನಮಲ್ಲಿಕಾರ್ಜುನ..

### ಪದಗಳ ಅರ್ಥ

ಹಿಂಡು-ಗುಂಪು
 ಅಗಲಿ-ದೂರವಾಗಿ
ಹಿಡಿವಡೆದ-ಹಿಡಿದುತರಲಾದ
ಕುಂಜರ-ಆನೆ,
ವಿಂಧ್ಯ-ಕಾಡು,
ಬಂಧನ-ಸೆರೆ, ಕಟ್ಟಿಹಾಕು.
ಅಂದ-ದರ್ಶನ

## ವಚನದ ಅರ್ಥ

ಇದೊಂದು ಮಹೋನ್ನತವಾದ ವಚನ. ಅವರ ಜೀವನಾನುಭಾವದ ದರ್ಶನ ದಿಂದ ಹೊಮ್ಮಿದ ಶ್ರೇಷ್ಠ ವಚನ. ಉನ್ನತ ತತ್ವವನ್ನು ಇಂಬಿಟ್ಟುಕೊಂಡಿರುವ ಧ್ವನಿಪೂರ್ಣ ವಚನ. ಈ ಚೆಂದವಚನ ತನ್ನೊಳಗೆ ಇರಿಸಿಕೊಂಡಿರುವ ಅಪಾರ ನಿಧಿಯನ್ನು ಇಲ್ಲಿ ವಿವರಿಸುತ್ತೇವೆ.ಮೊದಲು ವಚನದ ಭಾವಾರ್ಥವನ್ನು ತಿಳಿಯೋಣ.ಹಿಂಡಿನಿಂದ ಹಿಡಿದು ತರಲಾದ ಆನೆಯು ತನ್ನ ಕಾಡಿನಬಂಧುಗಳನ್ನು ನೆನೆಯುವಂತೆ ಪರಮಾತ್ಮ ಚನ್ನಮಲ್ಲಿಕಾರ್ಜುನನೇ ನಾನು ನಿನ್ನನ್ನು ನೆನೆಯುತಿದ್ದೇನೆ.ಬಂಧನದಲ್ಲಿ ಸಿಕ್ಕಿಬಿದ್ದ ಗಿಳಿಯು ತನ್ನ ಬಂಧುಗಳನ್ನು ನೆನೆವಂತೆ ನಾನು ನಿನ್ನನ್ನು ನೆನೆ ಯುತ್ತಿದ್ದೇನೆ.ಮಗುವೇ ನೀನು ಬಹಳ ದು:ಖ ಪಟ್ಟೆಯಲ್ಲ ಬಾ ಎಂದು ಕರುಣ ಯಿಂದ ನನ್ನ ಹಿಡಿದೆತ್ತಿ ನಿನ್ನ ದರ್ಶನವನ್ನು ತೋರಯ್ಯ ಚೆನ್ನಮಲ್ಲಿಕಾರ್ಜುನ ಎಂದು ಪರಮಾತ್ಮನನ್ನು ಬೇಡಿದ್ದಾರೆ.ಈ ವಚನದಲ್ಲಿ ಎರಡು ದೃಷ್ಟಾಂತ ಕಥೆಗಳಿವೆ. 1 ಆನೆಯ ರೂಪಕ . 2. ಗಿಳಿಯ ರೂಪಕ. ಆನೆಯ ಕಥೆ ಏನು? ಆನೆಯು ಕಾಡಿನಲ್ಲಿ ತನ್ನ ಬಂಧುಗಳೊಂದಿಗೆ ಸಹಜವಾಗಿ ಆನಂದದಲ್ಲಿತ್ತು. ಇಂತಹ ಆನೆಯನ್ನು ಕಾಡಿನಿಂದ ನಾಡಿಗೆ ಹಿಡಿದು ತರಲಾಗಿದೆ. ಆನೆಯ ಕಾಲಿಗೆ ಸರಪಳಿ, ಅದರ ಮುಂದೆ ಯಥೇ'ಚ್ಚವಾಗಿ ಕಬ್ಬು, ಬೆಲ್ಲ ಇತರ ಆಹಾರ ಇಡಲಾಗಿದೆ. ಏನೆಲ್ಲ ಇಟ್ಟಿದ್ದರೂ ಅದು ಆಹಾರ ಸ್ವೀಕರಿಸದೆ ಕಣ್ಣೀರು ಹಾಕುತ್ತಿದೆ. ಮೌನವಾಗಿ ರೋದಿಸುತ್ತಿದೆ. ಆಹಾರ ಮುಟ್ಟದೆ ಉಪವಾಸ ಆರಂಭಿಸಿದೆ. ನನಗೆ ನನ್ನ ಕಾಡುಬೇಕು ನನ್ನ ಬಂಧುಗಳು ಬೇಕು. ನನಗೆ ಸ್ವಾತಂತ್ರ್ಯ ಬೇಕು ಎಂದು ಉಪವಾಸ ಮಾಡುತ್ತಿದೆ. ಇದು ಆನೆಯ ಕಥೆ.2)!ಗಿಳಿಯ ಕಥೆ. ಇದು ತನ್ನ ಬಂಧು ಬಳಗಗಳೊಂದಿಗೆ ಸಹಜವಾಗಿ ನಿಸರ್ಗ ದಲ್ಲಿಹಾರಾಡಿಕೊಂಡಿತ್ತು. ಇದನ್ನು ಹಿಡಿದು ತಂದು ಪಂಜರದಲ್ಲಿ ಇಡಲಾಗಿದೆ. ಗಿಳಿಯಮುಂದೆ ಹಣ್ಣು, ಸಿಹಿ,

ಇತರ ತಿನಿಸುಗಳನ್ನು ಯಥೇಚ್ಚವಾಗಿ ಇಡಲಾಗಿದೆ. ಆದರೆ ಗಿಳಿ ತಿನ್ನುತ್ತಿಲ್ಲ. ಅದು ಉಪವಾಸ ಮಾಡುತ್ತಿದೆ. ನನ್ನ ಬಂಧುಗಳು ಬೇಕು ಎಂದು ಕಣ್ಣೀರು ಹಾಕುತ್ತಿದೆ. ಮೌನದಲ್ಲಿ ಮಿಡಿಯುತ್ತಿದೆ. ಈ ಆನೆ ಗಿಳಿಗಳಲ್ಲಿ ಅಕ್ಕಮಹಾ ದೇವಿಯವರು ಒಂದು ದರ್ಶನ ಪಡೆದರು. ಆ ಫಲವಾಗಿ ಈವಚನ ಸೃಷ್ಟಿಯಾಯಿತು. ಆನೆ ಗಿಳಿಗಳನ್ನು ಎಳೆತರಿಸಿದಂತೆ ರಾಜ ಕೌಶಿಕ, ಅಕ್ಕಮಹಾದೇವಿ ಯವರನ್ನು ಹಿಡಿದು ತರಿಸಿದ್ದಾನೆ. ಆನೆ ಗಿಳಿಗಳಿಂದ ಮೋಜು ತೆಗೆದುಕೊಳ್ಳುವಂತೆ ಮಹಾದೇವಿಯಕ್ಕನವರಿಂದ ವಿಲಾಸ ಭೋಗ ಪಡೆಯುವುದು ಅವನ ಗುರಿ.ಆನೆ ಗಿಳಿಗಳಿಗೆ ಆಮಿಷ ತೋರಿಸಿ ಅವುಗಳ ಸ್ವಾತಂತ್ರ್ಯ ಹರಣಮಾಡಿ ಅವುಗಳನ್ನು ಅರಮನೆಯ ಮೋಜಿಗೆ ಬಳಸಿಕೊಳ್ಳುತ್ತಿದ್ದಾನೆ. ಹಾಗೆ ಅಕ್ಕಮಹಾದೇವಿಯವರಿಗೂ ಅರಮನೆಯ ಭೋಗ ವೈಭವದ ಆಶೆ ತೋರಿಸಿ ತನ್ನ ಭೋಗ ವಿಲಾಸಗಳಿಗೆ ದಾಳವಾಗಿ ಬಳಸಿಕೊಳ್ಳುವ ಮನಸ್ಸು ಆತನದು. ಅದಕ್ಕಾಗಿ ಅರಮನೆಯ ಸಖಿಯರು ಬಂದಿದ್ದಾರೆ.ಚೆಂದ ಮಾತನಾಡುತ್ತಿದ್ದಾರೆ. ನೀವುರಾಣಿಯಾಗಿ ಮೆರೆಯಬಹುದು. ಮಹಾರಾಜರು ಏನೆಲ್ಲ ಸುಖಭೋಗ ಕೊಡುತ್ತಾರೆ. ಸೋಗಲಾಡಿಸಖಿಯರು ಬಣ್ಣದ ಮಾತನಾಡಿ ಮರುಳು ಮಾಡುತ್ತಿದ್ದಾರೆ. ರಮಿಸತೊಡಗಿದ್ದಾರೆ. ಕಡು ಶೋಕದಲ್ಲಿರುವ ಅಕ್ಕನವರನ್ನು ರಮಿಸುತ್ತ ಅರಮನೆಯ ವಿಸ್ತಾರ, ವೃಭೋಗಗಳನ್ನು ಪರಿಚಯಿಸಲು ಉದ್ಯಾನವನಕ್ಕೆ ಕರೆತಂದಿದ್ದಾರೆ. ಅರಮನೆಯನ್ನೆಲ್ಲ ಪರಿಚಯಿಸುತ್ತ ನಡೆದಿರುವಾಗ ಆನೆಯನ್ನು ಹಿಡಿದು ತಂದು ಕಟ್ಟಿಹಾಕಿರುವುದನ್ನು ಅವರು ಹೆಮ್ಮೆದ ಯಿಂದ ಹೇಳತೊಡಗಿದ್ದಾರೆ. ಅದು ಯಾಕೆ ಕಣ್ಣೀರು ಹಾಕಿದೆ ?ಮಹಾದೇವಿಯದವರು ಕೇಳಿದ್ದಾರೆ . ಅದು ನನ್ನ ಬಂಧುಗಳು ಬೇಕು ಕಾಡುಬೇಕು ಎಂದು ಉಪವಾಸ ಮಾಡುತ್ತಿದೆ.ಸಖಿಯರು ಹೇಳಿದರು. ಒಂದು ಆನೆ ಕೂಡ ರಾಜನ ದೌರ್ಜನ್ಯವನ್ನು ವಿರೋಧಿಸುತ್ತಿದೆ. ಅಕ್ಕನವರು ಮನಸ್ಸಿನಲ್ಲಿ ಅಂದುಕೊಂಡರು. ಹಾಗೆ ಮುಂದುವರಿದಾಗ ಅನೇಕ ಗಿಳಿಗಳನ್ನು ಹಿಡಿದುತಂದು ಪಂಜರದಲ್ಲಿಟ್ಟಿರುವ ದೃಶ್ಯ ಎದುರಾಯಿತು. ನೋಡಿ ನಿಮ್ಮನ್ನು ಸಂತೋಷಪಡಿಸಲು ಮಹಾರಾಜರು ಗಿಳಿಗಳನ್ನು ಹಿಡಿದು ತರಿಸಿದ್ದಾರೆ ಎಂದು ವಿವರಿಸತೊಡಗಿದ್ದಾರೆ.ಗಿಳಿಗಳು ಕೂಡ ಏನನ್ನೂ 'ಮುಟ್ಟದೆ ಮೌನ ಮಿಡಿಯುತ್ತಿವೆ. ಅರಮನೆಯ ಹೆಂಗಳೆಯರ ಮೋಜಿಗೆ ಹಿಡಿದು ತರಲಾದ ಈ ಮೂಕ ಜೀವಿಗಳ ಶೋಕದಲ್ಲಿ ಅಕ್ಕಮಹಾದೇವಿಯವರು ತಮ್ಮನ್ನು ಗುರುತಿಸಿಕೊಂಡರು. ಆನೆ ಗಿಳಿಗಳಿಗೆ ಬಂಬೊದಗಿದ ದು:ಖ ತನಗೂ ಬಂದೊದಗಿದೆ. ರಾಜನ ಅಂಕೆಯಿಂದ ಜೀವನ ಪರ್ಯಂತ ಇನ್ನು ಬಿಡುಗಡೆಯೇ ಇಲ್ಲ. ಇವನ ಹೆಂಗಳೆಯರ ಮೋಜಿಗೆ ಬಳಕೆಯಾಗಿ

ಕೊನೆಗೆ ಇಲ್ಲಿ ಕೊನೆಯುಸಿರೆಳೆಯಬೇಕು ನನಗೂ ಇವುಗಳ ಗತಿಯೇ ಬಂದೊದಗಿದೆ. ಇವುಗಳಂತೆ ಕೇವಲ ಉಪವಾಸ ಮಾಡಿದರೆ ಕಣ್ಣೀರು ಹಾಕಿದರೆ ನನಗೆ ಬಿಡುಗಡೆ ಇದೆಯೆ? ಹಾಗಾದರೆ 'ನಾನು ಏನು ಮಾಡಬೇಕು .ಅಕ್ಕನವರು ಚಿಂತಿಸಿದ್ದಾರೆ. ಆ ಫಲವೇ ಈವಚನ,

ಆನೆ, ಗಿಳಿಗಳಿಗೆ ಮಾತುಬರುವುದಿಲ್ಲ. ಆದರೂ ಅವು ಉಪವಾಸ ಮಾಡುವ ಮೂಲಕ ಪ್ರತಿಭಟಿಸಿವೆ.ನಾನು ಹೇಗೆ ಇವನಿಂದ ಬಿಡುಗಡೆ ಪಡೆಯಬೇಕು ಚಿಂತಿಸಿದ್ದಾರೆ. ಈಗಿಳಿ, ಆನೆಗಳಿ ಅನ್ನ ಬೇಕೊ? ಎಂದರೆ ನಮಗೆ ಅನ್ನ ಬೇಡ.ಬಂಧನ ಬೇಡ, ಬಿಡುಗಡೆ ಬೇಕು. ಸ್ವಾತಂತ್ರ್ಯ ಬೇಕು ಎಂದು ಶೋಕಿಸುತ್ತಿವೆ . ನನಗೂ ಅನ್ನಬೇಡ. ಬಿಡುಗಡೆ ಬೇಕು. ಸ್ವಾತಂತ್ರ್ಯ ಬೇಕು ಅಕ್ಕನವರುವಚನ ಹಾಡಿ ಕೊಂಡರು. ಆನೆ ಗಿಳಿಗಳಿಗೆ ಹೇಗೆ ಸ್ವಾತಂತ್ರ್ಯ ಇಲ್ಲವೋ ಹಾಗೆ ನನಗೂ ಸ್ವಾತಂತ್ರ ಇಲ್ಲ ಆನೆ ಗಿಳಿಗಳಿಗೆ ಒಂದು ಮನಸ್ಸಿದೆ ಅವುಗಳಿಗೆ ಅವುಗಳದೇ ಆದ ಜೀವಿತ ಇದೆ. ಅದರಂತೆ ನನಗೂ ಒಂದು ಮನಸ್ಸಿದೆ ವ್ಯಕ್ತಿತ್ವ ಇದೆ. ಅವು ನನ್ನ ಸ್ವತ್ತಲ್ಲ. ಎಂಬುದು ಈರಾಜನ ಕಲ್ಪನೆಗೂ ಬರದು. ಇದು ಅವನ ನಿರ್ಲಕ್ಷ್ಯದ ಪರಮಾವದಿ.ಇಷ್ಟೊಂದು ದುಷ್ಟನಾದ ರಾಜನನ್ನು ನಾನು ಹದಿನೆಂಟು ವರ್ಷದ ತರುಣಿ,ಎದುರಿಸುವುದಾದರೂ ಹೇಗೆ?ಈ ಆನೆ ಗಿಳಿಗಳಿಗೆ ಮಾತು ಬರುವುದಿಲ್ಲ ಆದರೂ ಅವು ಪ್ರತಿಭಟಿಸುತ್ತಿವೆ. ಹೇಗೆ ?ಮೌನ, ಉಪವಾಸ, ಅಸಹಕಾರದ ಮೂಲಕ. ಕಣ್ಣೀರು ಅವುಗಳ ಪ್ರತಿಭಟನೆ. ಅವುಗಳ ಬೇಡಿಕೆ ಏನು? ಬಂಧನದಿಂದ ಬಿಡುಗಡೆ. ಸ್ವಾತಂತ್ರ್ಯ ಬೇಕು.ನಮ್ಮ ಬಂಧನವನ್ನು ಬಿಡಿಸು ಇದು ಅವುಗಳ ಬೇಡಿಕೆ. ಹಾಗೆ ನಾನೂ ಬಂಧನಕ್ಕೊಳಗಾಗಿದ್ದೇನೆ.ನನಗೂ ಬಿಡುಗಡೆ ಬೇಕು ಸ್ವಾತಂತ್ರ್ಯ ಬೇಕು. ನನಗೊಂದು ಮನಸ್ಸಿದೆ. ವ್ಯಕ್ತಿತ್ವ ಇದೆ.. ಗುರಿ ಇದೆ. ಮೌಲ್ಯಗಳಿವೆ. ನಿನಗೆ ನಿನ್ನ ಮನಸ್ಸು ಗುರಿಗಳಿದ್ದಂತೆ ನನಗೂಇದೆ. ರಾಜ ಪ್ರತ್ಯಕ್ಷ ದೇವತಾಃ ಯಾರಿಗೆ ನಿನ್ನ ಬಾಲ ಬಡುಕರಿಗೆ ಪತಿಯೇ ಪ್ರತ್ಯಕ್ಷ ದೇವರು. ಹೌದು. ನನ್ನ ಪತಿ ಚೆನ್ನಮಲ್ಲಿಕಾರ್ಜುನ. ಈ ಸಾವ ಕೆಡುವ ರಾಜ ನನ್ನ ಗಂಡನಲ್ಲ. ಮಾತು, ಮನಸ್ಸಿರುವ ನಾನು ಬಿಡುಗಡೆ ಗೊಳ್ಳಲೆಬೇಕು. ನನಗೆ ಬಲ ಇಲ್ಲ. ಇವನನ್ನು ಬಲದಿಂದ ಗೆಲ್ಲಲಾರೆ. ಈದೇಹ ಅವನನ್ನು ಮೋಹಗೊಳ್ಳುವಂತೆ ಮಾಡಿದೆ. ಮೊದಲು ದೇಹವನ್ನು ದಂಡಿಸುತ್ತೇನೆ. ಆನೆ, ಗಿಳಿ ಉಪವಾಸ ಮಾಡಿದಂತೆ ನಾನೂ ಉಪವಾಸ ಮಾಡುತ್ತೇನೆ .ನಾನು ಸತರೂ ಸರಿ.ಅರಮನೆಯ ಅನ್ನ ಮುಟ್ಟುವುದಿಲ್ಲ.ಉಪವಾಸ ಮಾಡುತ್ತೇನೆ ಮಾತು ಬಿಟ್ಟು ಮೌನ ಹಿಡಿಯುತ್ತೇನೆ. ಅಕ್ಕಮಹಾದೇವಿಯವರು ನಿರ್ಧಾರ ಮಾಡಿದ್ದಾರೆ. ನಾನು ಕೇವಲಕಣ್ಣೀರು ಹಾಕಿದರೆ ಸ್ವಾತಂತ್ರ್ಯ ಪಡೆಯಲಾರೆ. ನನ್ನ ಗುರಿ ಬಿಡುಗಡೆ ಸ್ವಾತಂತ್ರ್ಯ. ನನಗೆ ಪರಮಾತ್ಮ ಬೇಕು.ನನ್ನ ಗುರಿ

ಸಾಧನೆ ಮುಖ್ಯ.ಪುರುಷನಿಗೆ ಆಶೆಗಳಿದ್ದಂತೆ ಮಹಿಳೆಗೂ ಇವೆ. ಉಪವಾಸ ಆರಂಭಿಸಿದ್ದಾರೆ.

ಈ ಉಪವಾಸ ಆರಂಭಿಸಲು ಅವರು ಆನೆ ಮತ್ತು ಗಿಳಿಯಿಂದ ಸ್ಫೂರ್ತಿ ಪಡೆದರು. ಆನೆ, ಗಿಳಿಗಳು ಎಷ್ಟು ಕಾಲ ಉಪವಾಸ ಇರಬಲ್ಲವು. ಹಸಿವು ಕಾಡಿದಾಗ ತಿನ್ನಬೇಕಾಗುತ್ತದೆ.ಆಗ ರುಚಿ ವಿಷಯಗಳು ನಮ್ಮನ್ನು ಯಾಮಾರಿಸಿಬಿಡು ಇವೆ. ಮೇಲಿನ ವಚನ ಅಕ್ಕಮಹಾದೇವಿಯವರ ಜೀವನಾನುಭವದಿಂದ ಪ್ರಕಟವಾದ ದಾರ್ಶನಿಕ ವಚನ. ಈವಚನದಲ್ಲಿ ಪ್ರಕೃತಿ ಕೊಡಮಾಡಿರುವ ಕೆಲವು ಸೂತ್ರಗಳಿವೆ. ಸಿದ್ಧಾಂತಗಳಿವೆ. ಅನ್ನ ಬೇಕೊ? ಸಾತಂತ್ರ್ಯ ಬೇಕೊ?ಉಪವಾಸ, ಮೌನ, ಅಸಹಕಾರ, ಸತ್ಯದಗುರಿ.ಅದರದರ್ಶನ. ಅಹಿಂಸೆ. ಈಕೆಲವು ಮೌಲ್ಯಗಳು ಈ ವಚನದಲ್ಲಿ ಅಡಕವಾಗಿವೆ. ಗಾಂಧೀಜಿಯವರು ಸತ್ಯ, ಆಹಿಂಸೆ, ಉಪವಾಸ,ಮೌನ ಇವು ಗಳನ್ನು ಅಚರಿಸಿ ಈದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟರು. ಕಾರ್ಲ್‌ಮಾರ್ಕ್ಸ್ ಅನ್ನ ಬೇಕೊ? ಸ್ವಾತಂತ್ರ್ಯ ಬೇಕೊ? ಪ್ರಶ್ನಿಸಿದ. ಗಾಂಧೀಜಿ ಮತ್ತು ಮಾರ್ಕ್ಸ್ನ್ ತತ್ವಗಳು ಈ ಹಿಂದೆಯೆ ಅಕ್ಕಮಹಾದೇವಿಯವರ ಈವಚನದಲ್ಲಿವೆ. ನಿಸರ್ಗದಲ್ಲಿ ಇದನ್ನು ಆನೆ, ಗಿಳಿಗಳು ಪ್ರಕಟಮಾಡಿವೆ. ಈದರ್ಶನ ಅಕ್ಕಮಹಾದೇವಿಯವರ ಜೀವನಾನುಭವದಿಂದ ಪ್ರಕಟವಾದುದು.

4) ಹರನೇ ನೀನೆನಗೆ ಗಂಡನಾಗ ಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ. ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ ಶಶಿಧರನ ಹತ್ತಿರಕೆ ಕಳುಹಿದರೆಮ್ಮವರು. ಭಸ್ಮವನೆ ಪೂಸಿ ಕಂಕಣವನೆ ಕಟ್ಟಿ ಚೆನ್ನ ಮಲ್ಲಿಕಾರ್ಜುನಯ್ಯ ನನಗೆ ನೀನಾಗಬೇಕೆಂದು.

ಪದಗಳ ಅರ್ಥ

ಹಸೆ-ಮದುವೆಗೆ ಕೂಡುವ ಹಾಸು,
ಮಣೆ.ಬೆಸಗೊಳ್-ಕೇಳು.
ಅಟ್ಟು-ಕಳುಹು,
ಶಶಿ ಧರ-ಚಂದ್ರನನ್ನು ಧರಿಸಿದವ,
ಶಿವ.ಭಸ್ಮ-ವಿಭೂತಿ,
ಆಗಬೇಕು-ಆಸರೆಯಾಗಬೇಕು ಗಂಡನಾಗಬೇಕು ತಪಿಸಿದ್ದೆ-ತಪಸ್ಸು ಮಾಡಿದ್ದೆ .

## ವಚಪದ ಅರ್ಥ

ಇದೊಂದು ಸುಂದರ ಭಾವಗೀತೆ. ಈ ವಚನದ ಸ್ಥಾಯಿಭಾವ ಭಕ್ತಿ, ಪ್ರಾರ್ಥ ನೆ, ಪ್ರೀತಿ. ಪರಮಾತ್ಮನನ್ನೆ ಪತಿಯನ್ನಾಗಿ ಪಡೆಯಬೇಕೆಂಬ ತೀವ್ರ ಹಂಬಲ ಇಲ್ಲಿದೆ. ಹರನೆ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ.ಹರನೆ ನೀನು ನನಗೆ ಗಂಡನಾಗಬೇಕೆಂದು ನಾನು ಹಲವು ಕಾಲ ತಪಸ್ಸು ಮಾಡಿದೆನು. ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ ಶಶಿಧರನ ಹತ್ತಿರಕೆ ಕಳುಹಿದರೆಮ್ಮವರು. ಲಗ್ನದ ಮಾತು ಬಂದಾಗ ಶಿವನೆ ನನ್ನ ಪತಿ ಎಂದು ನನ್ನನ್ನು ನಿನ್ನ ಬಳಿಗೆ ಕಳುಹಿಸಿ ಕೊಟ್ಟರು. ಲಗ್ನವನ್ನು ಕೂಡ ನಿನ್ನೊಡನೆ ನಿಶ್ಚಯ ಮಾಡಿದರು. ಹೀಗೆ ಹೇಳಬೇಕಾದರೆ ಅಕ್ಕನ ಧೈರ್ಯ ಎಷ್ಟಿರಬೇಡ ಭಸ್ಮವನೆ ಪೂಸಿ ಕಂಕಣವನೆ ಕಟ್ಟಿ ಚೆನ್ನಮಲ್ಲಿಕಾರ್ಜುನಯ್ಯನನಗೆ ನೀನಾಗಬೇಕೆಂದು. ವಿಭೂತಿ ಧರಿಸಿದರು. ಕೆಂಕಣ ಕಟ್ಟಿದರು ಚೆನ್ನಮಲ್ಲಿಕಾರ್ಜು ನನ ನನಗೆ ಗಂಡ ಎಂದು ಮದುವೆ ನೆರವೇರಿಸಿದರು. ಅಕ್ಕಮಹಾದೇವಿಯವರ ಬಹು ಪಾಲು ವಚನಗಳು ಸುಂದರ ಭಾವಗೀತಗಳು, ಹಾಡಲು ಗೀತಲಯ ಚೆಂದ ಇದೆ.

5) ಹಿತವಿದೆ, ಮತವಿದೆ, ಶ್ರುತಿ, ಪುರಾಣಾಗಮದ ಗತಿಯಿದೆ.
ಭಕುತಿಯ ಬೆಳಗಿನುನ್ನತಿಯಿದೆ. ಶ್ರೀವಿಭೂತಿಯ ಧರಿಸಿದಡೆ,
ಭವವರಿವುದು.
ದುರಿತ ಸಂಕುಳವನೊರಸುವುದು.
ಸಾಲೋಕ್ಯ,ಸಾಮೀಪ್ಯ,ಸಾರೂಪ್ಯ, ಸಾಯುಜ್ಯದಲ್ಲಿರಿಸುವುದು.
ನಿಯತವಿದು. ನಂಬು ಮನುಜ. ಜನನದ ಭೀತಿ, ಈ ವಿಭೂತಿ.
ಮರಣಭಯದಿಂದ ಅಗಸ್ತ್ಯ, ಕಾಶ್ಯಪಜಮದಗ್ನಿಗಳು ಧರಿಸಿದರು.
ಶ್ರೀಶೈಲ ಚೆನ್ನಮಲ್ಲಿಕಾರ್ಜುನನೊಲಿಸುವ ವಿಭೂತಿ.

## ಪದಗಳ ಅರ್ಥ

ಹಿತ-ಒಳ್ಳೆಯದು.
ಮತ-ಅಭಿಪ್ರಾಯ, ಧರ್ಮ,ಆಚಾರ,
ಗತಿ-ಮೋಕ್ಷ
ಉನ್ನತಿ-ಶ್ರೇಯಸ್ಸು ಭವವರಿವುದು-ಪಾಪಕರ್ಮನಾಶ,

ದುರಿತ-ಕೆಟ್ಟದ್ದು,
ನಿಯತ-ನಿತ್ಯ.
ಸಾಲೋಕ್ಯ ಸಾಮೀಪ್ಯ ಸಾರೂಪ್ಯಸಾಯುಜ್ಯ-ಇವು ಚತುರ್ವಿಧ ಫಲಗಳು

## ವಚನದ ಅರ್ಥ

ಈವಚನದಲ್ಲಿ ವಿಭೂತಿಯ ಮಹಿಮೆಯನ್ನು ವರ್ಣಿಸಲಾಗಿದೆ. ವಿಭೂತಿಯು ವೀರಶೈವ ಲಿಂಗಾಯತ ಧರ್ಮದ ಆಚಾರದಲ್ಲಿ ಒಂದು ಲಾಂಛನ, ಅಷ್ಟಾವರಣದಲ್ಲಿ ಒಂದು. ಧರ್ಮದ ಆಚಾರವಣೆ ಇಂತಹ ಆಚಾರ, ಲಾಂಛನಗಳಿಂದ ಆರಂಭವಾಗುತ್ತದೆ. ಮೋಕ್ಷಸಾಧನೆಗೆ ಲಾಂಛನಗಳ ಆಚಾರವೂ ಮುಖ್ಯ ಎಂದು ಧರ್ಮ ಪ್ರತಿಪಾದನೆ ಮಾಡುತ್ತದೆ. ಆ ವಿಚಾರ ಇಲ್ಲಿದೆ. ಮಹಿಳೆಯೂ ಧರ್ಮಗುರುವಾಗಿ ಧರ್ಮಬೋಧನೆ ಮಾಡುತ್ತಿದ್ದರೆಂಬುದಕ್ಕೆ ಅಕ್ಕನವರ ಈವಚನವೂ ಆಧಾರವಾಗಿದೆ.ವಿಭೂತಿಯ ವಿಶೇಷತೆ ಹೇಳಲು ಪೂರ್ವೇತಿಹಾಸವನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ವಿಭೂತಿ ಧರಿಸುವುದರಿಂದ ಒಳ್ಳೆಯದಿದೆ. ದರ್ಮದ ಸಮ್ಮತಿಯೂ ಇದೆ. ಶ್ರುತಿ, ಪುರಾಣ, ಆಗಮಗಳಿಗೆ ಮೋಕ್ಷ ದೊರೆತುದುದು ಈವಿಭೂತಿಯಿಂದಲೆ.ಭಕ್ತಿಯ ಬೆಳಗು ಉನ್ನತಿ ಈವಿಭೂತಿಯಿಂದಲೆ ದೊರೆವುದು ಹುಟ್ಟು ಸಾವುಗಳನ್ನು ಒಡೆದು ಹಾಕುವುದು. ಕೆಟ್ಟದ್ದನ್ನು ನಾಶ ಮಾಡುವುದು. ಇದು ಚತುರ್ವಿಧ ಫಲಗಳನ್ನು ದೊರಕಿಸಿ ಕೊಡುವುದು. ಇದು ಸತ್ಯ. ಇದನ್ನು ನಂಬು ಮನುಜ. ಹಿಂದೆ ಮರಣಕಾಲ ದಲ್ಲಿಅಗಸ್ಯ, ಕಾಶ್ಯಪ, ಜಮದಗ್ನಿಗಳು ಕೂಡ ಈವಿಭೂತಿ ಧರಿಸಿಯೆ ಉದ್ಧಾರವಾದರು. ಇದು ಜನನ, ಮರಣಗಳಿಗೆ ಭೀತಿಯನ್ನುಂಟುಮಾಡುತ್ತದೆ. ಇದು ಶ್ರೀಶೈಲದ ಚೆನ್ನಮಲ್ಲಿಕಾರ್ಜುನನಿಗೆ ಪ್ರೀತಿ. ಇದನ್ನು ನಾವು ಧರಿಸಿದರೆ ಅವನ ಪ್ರೀತಿಯೂ ನಮಗೆ ದೊರೆಯುತ್ತದೆ. ಎನ್ನುತ್ತಾರೆ. ಇಲ್ಲಿ ಇನ್ನೊಂದು ಮುಖ್ಯ ಅಂಶ ಗಮನಿಸ ಬೇಕು. ಅಕ್ಕನವರು ಶ್ರೀಶೈಲದಚೆನ್ನಮಲ್ಲಿಕಾರ್ಜುನದೇವರನ್ನುತಮ್ಮ ಇಷ್ಟಲಿಂಗದ ಹೆಸರಾಗಿ ಇಟ್ಟು ಕೊಂಡಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ. ಅಕ್ಕನವರು ಶ್ರೀಶೈಲಚೆನ್ನಮಲ್ಲಿಕಾರ್ಜುನನನ್ನೆ ತಮ್ಮ ಆರಾಧ್ಯ ದೈವವಾಗಿರಿಸಿಕೊಂಡಿದ್ದರು ಎಂಬುದಕ್ಕೆ ಈವಚನ ಆಧಾರವಾಗುತ್ತದೆ. ನಂತರ ಸಾಧನೆ, ತಪಸ್ಸು ಅನುಭಾವದ ಕಾಲಕ್ಕೆ ದೇವರ ಬಗೆಗಿನ ಅವರ ಚಿಂತನೆಗಳು ಬದಲಾದವು.

6)ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು.
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು.
ಅಸಗ ನೀರೊಳಗಿರ್ದು ಬಾಯಾರಿ ಸತ್ತಂತೆ ತಮ್ಮೊಳಗಿದ್ದ
ಮಹಾಘನವನರಿಯರು ಚೆನ್ನಮಲ್ಲಿಕಾರ್ಜುನ.

## ಪದಗಳ ಅರ್ಥ

ಜಾವ-3ಗಂಟೆ,
ನಾಲ್ಕು ಜಾವ-12ಗಂಟೆ.
ಅಶನ- ಅನ್ನ,
ಕುದಿ-ಕಳವಳಿಸು.

## ವಚನದ ಅರ್ಥ

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು . ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು. ಹಗಲು ಹನ್ನೆರಡು ಗಂಟೆ ಅನ್ನ, ಹಸಿವು ಎಂದು ಕಳವಳಿಸುತ್ತಾರೆ._ ರಾತ್ರಿ ಹನ್ನೆರಡು ಗಂಟೆ ರಾಗ, ಭೋಗ, ಚಟ, ವಿಷಯಗಳಿಗೆ ಕಳವಳಿಸುತ್ತಾರೆ. ಅಸಗ ನಿರೊಳಗಿರ್ದುಬಾಯಾರಿ ಸತ್ತಂತಾಗಬೇಡ. ಮಡಿವಾಳನು ನೀರಿನ ಸಂಪರ್ಕದಲ್ಲೆ' ಇರುತ್ತಾನೆ, ಆದರೂ ಬಾಯಾರಿ ಸತ್ತನಂತೆ. ತಮ್ಮೊಳಗಿರ್ದ ಮಹಾಘನವನರಿಯರು. •ಹಾಗೆ ತಮ್ಮಂತರಂಗದಲ್ಲಿ ಪರಮಾತ್ಮ ಇದ್ದರೂ ತಮ್ಮ ಶಕ್ತಿ ಅರಿಯದೆ ಕಳವಳಿಸುತ್ತಾರೆ. ಅರಿವು ಇಲ್ಲದೆ ದುಃಖಿಗಳಾಗಿ ನೋವು ಎಂದು ಒದ್ದಾಡುವ ಜೀವಿಗಳಿಗೆ ಈವಚನವೂ ಅಮೃತ ಪ್ರಾಯವಾಗಿದೆ.ಸಾಮಾನ್ಯ ಮಾನವರಂತೆ ಅಕ್ಕಮಹಾದೇವಿಯವರೂ ಪರಮಾತ್ಮನನ್ನು ಹೊರಗೆ ಹುಡುಕಲು ಬಂದರು.ಶ್ರೀಶೈಲ ಕಾಡಾರಣ್ಯ ಗುಹೆಯಲ್ಲಿ ಹತ್ತುವರ್ಷಗಳ ಕಾಲ ತಪಸ್ಸು ನಡೆಸಿ,
ಹಿರಿಯ ಯೋಗಿಗಳು, ಸಿದ್ದಪುರುಷರ,
ಮಾರ್ಗದರ್ಶನ ಪಡೆದು ಸಾಕ್ಷಾತ್ಕಾರ ಮಾಡಿಕೊಂಡರು.

7) ಹಾವಿನ  ಹಲ್ಲ ಕಳೆದು ಹಾವನಾಡಿಸಬಲ್ಲಡೆ ಹಾವಿನ ಸಂಗವೆ ಲೇಸು ಕಂಡಯ್ಯ.
ಕಾಯದ ಸಂಗವ ವಿವರಿಸಬಲ್ಲಡೆ
ಕಾಯದ ಸಂಗವೆ ಲೇಸು ಕಂಡಯ್ಯ.
ತಾಯಿ ರಕ್ಕಸಿಯಾದರೆ ಕಾಯ ವಿಕಾರವು ಚೆನ್ನಮಲ್ಲಿಕಾರ್ಜುನಯ್ಯ
ನೀನೊಲಿದವರು ಕಾಯಗೊಂಡಿದ್ದರೆನಬೇಡ..

## ವಚನದ ಅರ್ಥ

ಹಾವಿನಬಾಯ ಹಲ್ಲ ಕಳೆದು ಹಾವನಾಡಿಸ ಬಲ್ಲಡೆ ಹಾವಿನ ಸಂಗವೆ ಲೇಸು ಕಂಡಯ್ಯ. ಹಾವಿನ ಬಾಯಲ್ಲಿರುವ ಹಲ್ಲನ್ನು ಕಳೆದು ಆಟವಾಡಿಸುವುದಿದ್ದರೆ ಹಾವಿನ ಒಡನಾಟ ಒಳ್ಳೆಯದೆ. ಕಾಯದ ಸಂಗವೆ ವಿವರಿಸ ಬಲ್ಲೆಡೆ ಕಾಯದ ಸಂಗವೆಲೆಸು ಕಂಡಯ್ಯ, ಕಾಯದ ಒಡನಾಟವನ್ನು ಹೇಳುವುದಾದರೆ ದೇಹದ ಒಡನಾಟವು ಒಳ್ಳೆಯದೆ ತಾಯಿ ರಕ್ಕಸಿಯಾ ಆದರೆ ಕಾಯವಿಕಾರವು ನೀನೊಲಿದವರು ಕಾಯಗೊಂಡಿದ್ದರೆನಬೇಡ ಮಗುವಿಗೆ ತಾಯಿ ರಾಕ್ಷಸಿಯಾದರೆ ಮಗು ಬದುಕುವುದು ಕಷ್ಟ ಚೆನ್ನಮಲ್ಲಿಕಾರ್ಜುನನು ಒಲಿದವರು ದೇಹ ಧರಿಸಿದ್ದರೂ ಅವರು ದೇಹದ ಬಾಳುವೆ ಮಾಡುವವರಲ್ಲ.ದೇಹಕ್ಕಾಗಿ ಬದುಕುವವರಲ್ಲ. ದೇಹ, ಇಂದ್ರಿಯ ವಿಷವೂ ಆಗಬಲ್ಲವು.ಪ್ರಸಾದವೂ ಆಗಬಲ್ಲವು.ಕಾಯದ ಜೀವದ ವ್ಯವಹಾರವನ್ನು ಹಾವು,ಹಾವಾಡಿಗನ ಸ್ನೇಹದಂತೆ ಎಂದು ಚಿತ್ರಿಸಿದ್ದಾರೆ. ನಮ್ಮ ಜೀವನವು ಹಾವಾಡಿಗನ ಹಾಗೆ ನಿತ್ಯವೂ ಅಪಾಯದಲ್ಲಿದೆ. ಯಾವಾಗ ಹಾವು ಹಾವಾಡಿಗನನ್ನು ಕೊಲ್ಲುವುದೊ ? ಅದು ಅನಿಶ್ಚಿತ ಜೀವನ ಆದರೂ ಹಾವಾಡಿಗ ತನ್ನ ಬುದ್ದಿ ವಂತಿಕೆಯಿಂದ ತನ್ನ ಜೀವನ ಸಾಗಿಸುತ್ತಾನೆ, ಆದರೆನಾವು ಪಡೆದುಬಂದಿರುವ ಕಾಯದ ಸಂಗವು ಹಾವಿನ ಸಂಗಕ್ಕಿಂತಲೂ ಘೋರವಾದುದು. ವಿಚಾರಿಸಲಾಗಿ ಹಾವು,ಕಾಯದ ಸಂಗಗಳು ಎರಡೂ ಅಪಾಯಕಾರಿಯಾದವುಗಳೆ ಆಗಿವೆ. ಹಾವಾಡಿಗ ಹಾವಿನ ಸಂಗವನ್ನು ತನ್ನ ಲಾಭಕ್ಕೆ ಉಪಯೋಗಿಸಿಕೊಳ್ಳುವಂತೆ ನಾವು ನಮ್ಮ ಜೀವನ ಸುಂದರ ಮಾಡಿಕೊಳ್ಳುವುದಕ್ಕಾಗಿ ಈ ದೇಹವನ್ನು ಆತ್ಮನ ಶ್ರೇಯಸ್ಸಿಗೆ ಉಪಯೋಗಿಸಿಕೊಳ್ಳಬೇಕು.
ತಾಯಿ ರಕ್ಕಸಿಯಾದರೆ ಕಾಯವಿಕಾರವು. ಇದೊಂದು ಅಮೋಘ ರೂಪಕ. ತಾಯಿ ರಕ್ಕಸಿ ಎಂದರೇನು? ದೇಹವು ಮನಸ್ಸಿಗೆ ಅಶ್ರಯಸ್ಥಾನವಾದರೂ ಮನಸ್ಸಿನ ಇಚ್ಛೆಯಂತೆ ಈದೇಹವು ವರ್ತಿಸುತ್ತದೆ. ಮನಸ್ಸಾಗಲಿ, ಇಂದ್ರಿಯಗಳಾಗಲಿ, ದೇಹವಾಗಲಿ

ಆತ್ಮನಿಗೆ ರಾಕ್ಷಸಿಯಾಗದಂತೆ ನಾವು ಎಚ್ಚರವಹಿಸಬೇಕು. ಮನ ರಾಕ್ಷಸಿಯಾದರೆ ಕಾಯವೂ ರಾಕ್ಷಸಿಯಾಗಿಬಿಡುತ್ತದೆ. ಆಗ ಆತ್ಮನಿಗೆ ಪರಿಭವ ಈ ಎಚ್ಚರ ಅನುಭಾವ ಜೀವನ ನಡೆಸುವವರಿಗೆ ಬೇಕು.ಮನಸ್ಸಿಗೆ ಜ್ಞಾನವನ್ನು, ದೇಹಕ್ಕೆ ಭಕ್ತಿ ಯನ್ನು ಅಳವಡಿಸಿಕೊಳ್ಳುವುದೆ ತಾಯ್ತನ ವಿಷಯಲಂಪಟತನ ದುರ್ವತ್ತನೆ, ಅವಿಚಾರ,ಹಿಂಸೆ, ಅಜ್ಞಾನ, ಅವಿವೇಕ, ಅನೀತಿ,ಕೌರ್ಯದಿಗಳ ರಾಕ್ಷಸಗುಣ. ಇವು ಆತ್ಮನಿಗೆ ಲೇಸ ದುದಲ್ಲ. ಚೆನ್ನಮಲ್ಲಿಕಾರ್ಜುನ ನೀನೊಲಿದವರು ಕಾಯಗೊಂಡಿದ್ದರೆನಬೇಡ ದುಷ್ಟರೂ ದೇಹವಿಡಿದು ಬದುಕಬೇಕು. ಮನುಷ್ಯರು, ಮಹಾತ್ಮರೂ ದೇಹವಿಡಿದು ಬದುಕ ಬೇಕು.ಹಾಗೆಂದು ದೇಹವಿಡಿದವರು ಅಲ್ಪವೆಂದೇನೂ ಅಲ್ಲ. ದೇಹವಿಡಿದ ಶರಣರು ಆನಂದಕ್ಕಾಗಿ ಬದುಕಿದರು . ಆನಂದವನ್ನು ಲೋಕಕ್ಕೂ ಹಂಚಿದರು.

8) ಹಸಿವೆ ನೀನು ನಿಲ್ಲು ನಿಲ್ಲು, ತೃಷೆಯೆ ನೀನು ನಿಲ್ಲು
ನಿದ್ರೆಯೆ ನೀನು ನಿಲ್ಲು ನಿಲ್ಲು ಕಾಮವೆ ನೀನು ನಿಲ್ಲು
ಕ್ರೋಧವೆ ನೀನು ನಿಲ್ಲು ನಿಲ್ಲು, ಲೋಭವೆ ನೀನು ನಿಲ್ಲುನಿಲ್ಲು,
ಮೋಹವೆ ನೀನು ನಿಲ್ಲು ನಿಲ್ಲು ಮದವೆ ನೀನು ನಿಲ್ಲುನಿಲ್ಲು
ಮತ್ಸರವೆ ನೀನು ನಿಲ್ಲು ನಿಲ್ಲು ಸಚರಾಚರವೆ ನೀನು ನಿಲ್ಲು ನಿಲ್ಲು.
ನಾನು ಚೆನ್ನ ಮಲ್ಲಿಕಾರ್ಜುನ ದೇವರ ಬಳಿಗೆ ಅವಸರದ ಓಲೆ
ಒಯ್ಯುತ್ತಲಿದ್ದೇನೆ. ಶರಣು ಶರಣಾರ್ಥಿ.

ವಚನದ ಅರ್ಥ

ಹಸಿದೆ ನೀನು ನಿಲ್ಲು ನಿಲ್ಲು ತೃಷೆಯೆ ನೀನು ನಿಲ್ಲು ನಿಲ್ಲು ನಿದ್ರೆಯೆ ನೀನು ನಿಲ್ಲುನಿಲ್ಲು ಹಸಿವೆ, ಬಾಯಾರಿಕೆಯೆ, ನಿದ್ರೆಯೆ ನೀವು ಸ್ವಲ್ಪ ನಿಲ್ಲಿ. ಕಾಮವೆ ನೀನು ನಿಲ್ಲು ನಿಲ್ಲು, ಕ್ರೋಧವೆ ನೀನು ನಿಲ್ಲುನಿಲ್ಲು, ಲೋಭವೆ ನೀನು ನಿಲ್ಲುನಿಲ್ಲು, ಕಾಮ, ಕ್ರೋಧ,ಲೋಭಗಳೆ ನೀವು ಸ್ವಲ್ಪ ನಿಲ್ಲಿ ನಿಲ್ಲಿ. ಮೋಹವೆ ನೀನು ನಿಲ್ಲು ನಿಲ್ಲು, ಮದವೆ ನೀನು ನಿಲ್ಲು ನಿಲ್ಲು ಮತ್ಸರವೆ ನೀನು ನಿಲ್ಲುನಿಲ್ಲು. ಮೋಹ, ಮದ, ಮತ್ಸರಗಳೆ ನೀವು ನಿಲ್ಲಿ ನಿಲ್ಲಿ. ಸಚರಾಚರವೆ ನೀನು ನಿಲ್ಲು ನಿಲ್ಲು. ನಾನು ಚೆನ್ನಮಲ್ಲಿ ಕಾರ್ಜುನ ದೇವರದೇವನ ಅವಸರದ ಓಲೆಯನೊಯ್ಯುತ್ತಲಿದ್ದೇನೆ. ಶರಣು ಶರಣಾರ್ಥಿ. ಅನು ಭಾವಿಗಳಿಗೆ ತಪಸ್ಸು, ಅನುಷ್ಠಾನ ಯೋಗಮಾರ್ಗದಲ್ಲಿ ಮಾರ್ಗದರ್ಶನ ಮಾಡುವ ಮಹೋನ್ನತ ವಚನ ಇದು. ಜೀವಾತ್ಮನು ಪರಮಾತ್ಮದ ಹಂಬಲ ಹಚ್ಚಿಕೊಂಡು ಪಡೆದೆ ತೀರಬೇಕೆಂಬ ಹುಡುಕಾಟಕದಲ್ಲಿ ಏನೆಲ್ಲ ಸಾಧನೆ ನಡೆಸಿದ. ಅಕ್ಕಮಹಾದೇವಿಯವರು ಚೆನ್ನಮಲ್ಲಿಕಾರ್ಜುನನನ್ನು

ಪಡೆಯಬೇಕೆಂದು ಪರಿಪೂರ್ಣಸಾಧನೆ ನಡೆಸಿದ್ದಾರೆ. ಇಂದು ಮನುಷ್ಯ ಏನಾಗಿದ್ದಾನೆ ನೆನೆದರೆ ಭಯವಾಗುತ್ತದೆ. ಜಾತಿಯ ಮತೀಯ ಗೋಡೆಗಳು ದೊಡ್ಡವಾಗುತ್ತಿವೆ. ಪತ್ರಿಕೆ, ಟಿ.ವಿ.,ರೇಡಿಯೊ, ರಾಜಕೀಯ ಕ್ಷೇತ್ರವಂತೂ ಒಂದುವರ್ಣದ ವರ್ಗದ ಗುತ್ತಿಗೆಯಾಗಿಹೋಗಿದೆ. ಧರ್ಮ,ಸಂಸ್ಕೃ ತಿಯ ಹೆಸರಿನಲ್ಲಿ ನಡೆಯುತ್ತಿರುವ ಧಾಳಿ ಹೇಳಲಸದಳ. ಇತರ ಧರ್ಮ, ಸಂಸ್ಕೃತಿ ವಿಚಾರಗಳಿಗೆ ಉಳಿಗಾಲವಿಲ್ಲದಂತೆ ತುಳಿಯಲಾಗುತ್ತಿದೆ. ನಾನು ಮಾತ್ರ ಉಳಿ ಯಬೇಕೆನ್ನುವ ಸ್ವಾರ್ಥ, ಅಹಂಕಾರಗಳು ಎಲ್ಲ ದೇಶಗಳಲ್ಲಿ ಬಲವಾಗಿ ಬೆಳೆಯುತ್ತಿದೆ. ಇಂತಹ ಎಲ್ಲ ಮನುಷ್ಯರು ಅಕ್ಕಮಹಾದೇವಿಯವರು ಹೇಳಿದಂತೆ ಒಂದಿಷ್ಟು ಉಪವಾಸ ಮಾಡಿದರೆ ದೇಹ, ಇಂದ್ರಿಯ, ಮನಸ್ಸುಗಳನ್ನು ಮಿದ್ದು ಹದ್ದು ಬಸ್ತಿನಲ್ಲಿ ಡಲು ಬರುತ್ತದೆ.ವಿಶ್ವದ ಅನೇಕ ಸಮಸ್ಯೆಗಳು ತಂತಾನೆ ಬಗೆಹರಿಯುತ್ತವೆ. ಇಲ್ಲಿ ಅಕ್ಕಮಹಾದೇವಿಯವರು ಇಂದ್ರಿಯಗಳಿಗೆ ಏನು ಹೇಳುತ್ತಿದ್ದಾರೆ.

ಹಸಿವು,ತೃಷೆ, ನಿದ್ರೆ, ಕಾಮ, ಕ್ರೋಧ, ಲೋಭ, ಮೋಹ, ಮದ,ಮತ್ಸರ, ಸಚ ರಾಚರ ಇವುಗಳಿಗೆ ಹೇಳುತ್ತಿದ್ದಾರೆ. ನೀವು ಸ್ವಲ್ಪ ಅಲ್ಲಿ ನಿಲ್ಲಿ. ಇದುವರೆಗೆ ನಿಮ್ಮ ಜೊತೆವ್ಯವಹರಿಸಿದೆ. ನಿಮ್ಮ ಸಂಬಂಧಗಳು ಈದೇಹ ಇರುವವರೆಗೆ ಇದ್ದದ್ದೆ. ಅದೆ ಊಟ, ಅದೆ ನಿದ್ರೆ, ಆಲಸ್ಯ, ರಾಗ ಭೋಗಗಳು. ಇದೊಂದು ಮುಗಿಯದ ಕಥೆ. ನನಗೀಗ ತುರ್ತುಕೆಲಸ ಇದೆ. ನನಗೆ ಗುರು, ಹಿರಿಯರು, ಶರಣರು ಒಂದು ಪತ್ರ ಕೊಟ್ಟಿದ್ದಾರೆ. ನಾನು ಅದನ್ನು ಕೂಡಲೆ ಚೆನ್ನಮಲ್ಲಿಕಾರ್ಜುನನಿಗೆ ಕೊಡಬೇಕಾಗಿದೆ. ಈಗ ನಿಮಗೆ ನಮಸ್ಕಾರ. ಹೋಗಿಬರುತ್ತೇನೆ. ಹೇಳುತ್ತಿದ್ದಾರೆ. ಇನ್ನು ಅವರು ಈ ರಾಗ ಭಾವಗಳಿಗೆ ಸಿಗುವವರಲ್ಲ. ರಾಗಭೋಗಾದಿಗಳು ಈದೇಹಕ್ಕಂಟಿದ ಜನ್ಮ ಜನ್ಮದ ಸಂಬಂಧಗಳು. ಇವುಗಳ ತೊಡಕಿನಲ್ಲಿ ಬಿದ್ದರೆ ಬಿಡುಗಡೆಯೆ ಇಲ್ಲ. ಇದನ್ನು ಅಕ್ಕನವರು ತಿಳಿದರು. ನಮಸ್ಕಾರ ಹಾಕಿ ಹೊರಟುಬಿಟ್ಟರು. ಇದೊಂದು ಚೆಂದ ರೂಪಕ ಚಿತ್ರಣ. ಎಷ್ಟೊಂದು ಮನೋಜ್ಞವಾಗಿ ಹೇಳಿದ್ದಾರೆ. ಮನುಷ್ಯ ಅಲ್ಪನಾ ಗುವುದು ಈ ರಾಗಾದಿಗಳಿಂದ ನಾವು ಮೊದಲು ಸ್ವಾರ್ಥವನ್ನು ಬಿಡಬೇಕು.ಇದ ರಿಂದ ಅಕ್ಕನವರು ಪಾರಾದರು. ಜಗತ್ತಿನ ಪ್ರತಿ ಮನುಷ್ಯ ವಾರಕ್ಕೊಮ್ಮೆ ಒಂದು ದಿನನಿರಾಹಾರ ದಿನ ಆಚರಿಸಿದರೆ ಸಮಸ್ಯೆಗಳು ತಂತಾನೆ ಬಗೆಹರಿದು ಮನುಷ್ಯನು ಪರಿಪೂರ್ಣನಾಗುತ್ತಾನೆ. ಇದೆ ಸಣ್ಣದು ದೊಡ್ಡದಾಗುವ ದಾರಿ. ಗುರುಗಳ ಮಹಾತ್ಮರ ದಿನಚರಿಗಳು, ವೈಯಕ್ತಿಕವಾಗಿ ಕಂಡರೂ ವ್ಯವಸ್ಥೆ ಯನ್ನು ಸರಿಗೊಳಸುವ ಸಾಮಾಜಿಕ ಚಿಂತನೆಗಳು ಇಲ್ಲಿವೆ .ಜನನಾಯಕರಾದವರು ಮೊದಲು ಉನ್ನತ

ವ್ಯಕಿತ್ವಗಳಿಸಿಕೊಳ್ಳಬೇಕು.ಆ ವ್ಯಕ್ತಿತ್ವಗಳಿಸಿಕೊಳ್ಳಲು ಇಂತಹ ಮಾದರಿ ಬೇಕು.

**9) ಹಣ್ಣು ಮೆದ್ದ ಬಳಿಕ ಆ ಮರವನಾರು ತರಿದರೇನು?**
**ಹೆಣ್ಣು ಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು?**
**ಮಣ್ಣು ಬಿಟ್ಟ ಬಳಿಕ ಆ ಹೊಲವನಾರುತ್ತರೇನು?**
**ಚೆನ್ನಮಲ್ಲಿಕಾರ್ಜುನನರಿದ ಬಳಿಕ ಆ ಕಾಯವ**
**ನಾಯಿ ತಿಂದರೇನು? ನೀರು ಕುಡಿದರೇನು?**

## ಪದಗಳ ಅರ್ಥ

ಮೆದ್ದು-ಸವಿದು
ತರಿ-ಕತ್ತರಿಸು, ಸವರು,
ಹೆಣ್ಣು-ಪತ್ನಿ,
ಮಣ್ಣು-ಬೆಳೆವ ಭೂಮಿ

## ವಚನದ ಅರ್ಥ

ಹಣ್ಣುಮೆದ್ದ ಬಳಿಕ ಆ ಮರವನಾರು ತರಿದರೇನು? ಹೆಣ್ಣುಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು? ಹಣ್ಣು ಸವಿದ ಮೇಲೆ ಅಂದರೆ ಮರದಿಂದ ಹಣ್ಣು ಗಳನ್ನು ಬಿಡಿಸಿಕೊಂಡಮೇಲೆ ಅ ಮರದ ಕಾಳಜಿ ಕಡಿಮೆ ಆಗುತ್ತದೆ. ಹೆಣ್ಣನ್ನು ಬಿಟ್ಟ ಮೇಲೆ ವಿಚ್ಛೇದನ ಕೊಟ್ಟಮೇಲೆ, ಗಂಡ ಆಕೆ ವಿಚಾರದಲ್ಲಿ ಕಾಳಜಿಮಾಡುವು ದಿಲ್ಲ ಮಣ್ಣು ಬಿಟ್ಟ ಬಳಿಕ ಆ ಹೊಲವನಾರುತ್ತರೇನು? ಮಣ್ಣು ಎಂದರೆ ಭೂಒಡೆತನವನ್ನು ಬಿಟ್ಟ ಮೇಲೆ ಯಾರು ಅಲ್ಲಿ ಬೇಸಾಯ ಮಾಡಿದರೇನು? ಬಿಟ್ಟರೇನು? ಚೆನ್ನ ಮಲ್ಲಿಕಾರ್ಜುನನರಿದ ಬಳಿಕ ಆ ಕಾಯವ ನಾಯಿ ತಿಂದರೇನು? ನೀರು ಕುಡಿದರೇನು? ಪರಮಾತ್ಮ ಏನು ಎಂದು ತಿಳಿದ ಮೇಲೆ ಈ ಶರೀರವನ್ನು ನಾಯಿ ತಿಂದರೂ ಅಷ್ಟೆ ನೀರು ಕುಡಿದರೂ ಅಷ್ಟೆ ಅಕ್ಕನವರಿಗೆ ಈಗ ದೇಹದ ಬಗೆಗೆ ನಿರ್ಲಕ್ಷ್ಯ, ಭಾವ ಬಂದಿದೆ. ನಿರ್ಲಿಪ್ತಭಾವದ ವಚನವಿದು. ಇದುಸತ್ಯ ಸಾಕ್ಷಾತ್ಕಾರದ ದರ್ಶನದಿಂದ ಬಂದುದು. ಸತ್ಯ ವಿಷಣ್ಣತೆಯನ್ನು ತಂದಿದೆ. ದೇವರು ಚೆನ್ನಮಲ್ಲಿಕಾರ್ಜುನನು. ಅವನು ಸೃಷ್ಟಿಸರ್ತ, ಸಾವಿಲ್ಲದ

ಗಂಡ, ಚೆಲುವ, ತರುಣ, ಆನಂದಮಯ, ಏನೆಲ್ಲ ಆನಂದಗಳು ಅಲ್ಲಿವೆ. ದುಃಖವೇ ಇಲ್ಲ. ಅವನನ್ನು ಪತಿಯನ್ನಾಗಿ ಪಡೆಯಬೇಕೆಂದು ರಾಜ, ಅರಮನೆ,ರಾಣಿಪದವಿ, ತಂದೆ, ತಾಯಿ, ಬಂಧು, ಊರು, ಗುರು,ಮಠ ಸರ್ವ ಸ್ವವನ್ನು ತೊರೆದು ಬಂದರು. ಫಲ ಏನು? ದೇವರು ಮನುಷ್ಯನೂ ಅಲ್ಲ. ಅದು ಏನೂ ಅಲ್ಲದ, ಎಲ್ಲ ಜ್ಞಾನ, ತರ್ಕಗಳಿಗೆ ಮೀರಿದ, ಈ ಜಗತ್ತು ಜೀವ ಏನೊಂದಕ್ಕೂ ಸಿಗದ ಏನೆಲ್ಲ ಚಿಂತನೆಗೆ, ಶೋಧನೆಗೆ ಗ್ರಾಸವಾದ ಪರವಸ್ತುವಿಚಾರವಾಗಿದೆ. ದೇವರು ಕಥೆಗಳಿಗೂ, ದೇವರು ಎನ್ನುವ ವಾಸ್ತವಕ್ಕೂ ಅರ್ಥಾತ್ ಸಂಬಂಧವಿಲ್ಲ. ಈ ದರ್ಶನ ದಿಂದ ವಿಷಣ್ಣತೆ ಅವರಿಸಿದೆ. ಅವರಿಗೆ ಈ ಸತ್ಯ ದರ್ಶನದಿಂದ ದೊಡ್ಡ ಆಘಾತವೇ ಆಗಿದೆ. ಭೌತದ ಪರಿಪೂರ್ಣ ನಿರಾ ಕರಣೆಯಿಂದ ಅವರಿಗೆ ಸತ್ಯದ ದರ್ಶನವಾಯಿತು. ಇದಕ್ಕೆ ಅವರು ತೆರಬೇಕಾದುದು ತಮ್ಮ ಜಿವನ ಸರ್ವಸ್ವವನ್ನೆ ಅವರು ಮೀಸಲಿಡಬೇಕಾಯಿತು. ಆನಂದ, ಅಮೃತತತ್ವ ಎಲ್ಲ ಬರಿಯ ಶಬ್ದಜಾಲ. ಇರುವುದನ್ನು ಒಪ್ಪಿಕೊಳ್ಳುವುದೆ ಜೀವನವಾಗಿದೆ.ಇದಕ್ಕೆ ಸರ್ವಸಂಗ ಪರಿತ್ಯಾಗ ಬೇಕಿತ್ತೆ? ಸಮಾಜದ ಮುಖ್ಯವಾಹಿನಿಯಿಂದ ಬಂದು ಉಂಡದ್ದೇನು? ಕಂಡದ್ದೇನು? ಹೂಮಾಲೆಯೆಂದು ಕೊಂಡದ್ದು ಹಗ್ಗವೂ ಅಲ್ಲ. ಹಾವೂ ಅಲ್ಲ. ಬರಿಯ ನೆಳಲಾಯಿತು. ಅಮೃತತತ್ವ, ಆನಂದ,ಮುಕ್ತಿಎಂದುಕೊಂಡದೆಲ್ಲ ಬರಿಯ ಶಬ್ದ ಬ್ರಹ್ಮವಾಯಿತು. ಹುಟ್ಟು ಆದಮೇಲೆ ಸಾವು ನಿಶ್ಚಯ. ದೇಹಪ ಡೆದಮೇಲೆ ಹಸಿವು,ತೃಷೆ ವಾಸ್ತವ. ಈ ವಿಸ್ಮಯ,ಸತ್ಯಗಳನ್ನು ಅನ್ವೇಷಣೆ ಮಾಡುತ್ತ ಆವರಿಸಿದ ವಿಷಣ್ಣತೆಯಿಂದ ಮೂಡಿದ ವಚನವಿದು.

ಹಣ್ಣಮೆದ್ದ ಬಳಿಕ ಆ ಮರವನಾರು ತರಿದರೇನು? ಮರದಲ್ಲಿ ಹಣ್ಣು ಇರುವವರೆಗೆ ಅದನ್ನು ಜೋಪಾನಮಾಡುತ್ತಾರೆ. ಫಸಲುತೆಗೆದ ಮೇಲೆ ಕಾಳಜಿ ಹೋಗಿ ಬಿಡುತ್ತದೆ. ಹೆಣ್ಣಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು? ಮಡದಿಯಲ್ಲ ಎಂದು ಆಕೆಯನ್ನು ದೂರ ತಳ್ಳಿದ ಮೇಲೆ ಆಕೆ ಯಾರ ವಶವಾದರೇನು? ಮಣ್ಣು ಬೇಡ ಎಂದು ಬಿಟ್ಟ ಮೇಲೆ ಅಲ್ಲಿ ಯಾರು ಬೇಸಾಯ ಮಾಡಿದರೇನು? ಆಗ ಈಗಿನ ಹಾಗೆ ಭೂಮಿಗೆ ಬೆಲೆ ಇರಲಿಲ್ಲ. ಜನಸಂಖ್ಯೆಯೂ ಕಡಿಮೆ. ಜನರು ಭೂಮಿ ಬಿಟ್ಟು ಹೊಲಸೆ ಹೋಗಿಬಿಡುತ್ತಿದ್ದರು. ಅಥವಾ ಬೇಡವಾದುದನ್ನು ಬಿಟ್ಟು ಬಿಡುತ್ತಿದ್ದರು. ಅದನ್ನು ನಂತರ ಯಾರು ಬೇಸಾಯ, ಅಥವಾ ಉಪಯೋಗ ಪಡೆದುಕೊಳ್ಳುತ್ತಾರೆ ಅವರದಾಗುತ್ತಿತ್ತು.ಹಾಗೆ ಚೆನ್ನಮಲ್ಲಿಕಾರ್ಜುನ ಏನು ಎಂದು ಗೊತ್ತಾದಮೇಲೆ ಈದೇಹ ಇದ್ದರೂ ಅಷ್ಟೆ ಸತ್ತರೂ ಅಷ್ಟೆ ಅದನ್ನು ನಾಯಿಯಾದರೂ ತಿನ್ನಲಿ ನೀರಾದರೂ ಕೊಳೆಸಲಿ. ಈ

ದೇಹಸಂಬಂಧಗಳು ಒಂದೂ ಬೇಡ. ಜೀವನ ಈಗ ಶೂನ್ಯವಾಗಿ ಕಾಣತೊಡಗಿದೆ

. ಚೆನ್ನಮಲ್ಲಿಕಾರ್ಜುನನು ಕೇವಲ ಭಾವಸತ್ಯವಾಗಿ ಹೋದ.

10) ಹಾಲ ಹಿಡಿದು ಬೆಣ್ಣೆಯನರಸಲುಂಟೆ? ಲಿಂಗವ ಹಿಡಿದು ಪುಣ್ಯ ತೀರ್ಥಕ್ಕೆ ಹೋಗಲುಂಟೆ?
ಲಿಂಗತೀರ್ಥಪ್ರಸಾದವ ಕೊಂಡು
ಅನ್ಯಬೋಧೆ, ಅನ್ಯ ಶಾಸ್ತ್ರ ಹಾರೈಸಲೇತಕ್ಕೆ?
ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದೆನಾದಡೆ ತಡೆಯದೆ
ಹುಟ್ಟಿಸುವ ಶ್ವಾನಗರ್ಭದಲ್ಲಿ, ಅದೆಂತೆಂದೊಡೆ, ಶಿವಧರ್ಮ
ಪುರಾಣ- ಇಷ್ಟಲಿಂಗಮವಿಶ್ವಸ್ಯತೀರ್ಥಲಿಂಗಸ್ಯ ಪೂಜಕ:||
ಶ್ವಾನಯೋನಿ ಶತಂಗತ್ವ ಚಾಂಡಾಲಗೃಹಂ ಆಚರೇತ್॥
ಇದು ಕಾರಣ ಗುರು ಕೊಟ್ಟಲಿಂಗದಲ್ಲಿಯೆ ಎಲ್ಲತೀರ್ಥಂಗಳು
ಎಲ್ಲಕ್ಷೇತ್ರಗಳು ಇದ್ದಾವೆಂದು ಭಾವಿಸಿ ಮುಕ್ತರಪ್ಪುದಯ್ಯ.
ಇಂತಲ್ಲದೆ ಗುರು ಕೊಟ್ಟ ಲಿಂಗವ ಕಿರಿದು ಮಾಡಿ
ತೀರ್ಥಲಿಂಗವ ಹಿರಿದು ಮಾಡಿ ಹೋಹಾತಂಗೆ ಅಘೋರ ನರಕ
ತಪ್ಪದು ಕಾಣಾ ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ಅವಿಶ್ವಸ್ಯ-ಶ್ರದ್ಧಾ ಹೋದರೆ,
ತೀರ್ಥಲಿಂಗಸ್ಯ-ತೀರ್ಥಕ್ಷೇತ್ರದ ಲಿಂಗದಲ್ಲಿ, ಅಂದರೆ ಗುಡಿಯ ಲಿಂಗದಲ್ಲಿ. ಪೂಜಕಃ- ಪೂಜೆ ಮಾಡುವವನು. ಶ್ವಾನಯೋನಿ- ನಾಯಿ ಜನ್ಮ,
ಶತ-ನೂರು .
ಆಚರೇತ್-ಅಲ್ಲಿಹುಟ್ಟಿಸುವ.

## ವಚನದ ಅರ್ಥ

ಇಷ್ಟಲಿಂಗದ ಮಹತ್ವವನ್ನು ಪ್ರತಿಪಾದಿಸುವ ವಚನವಿದು.
ತೀರ್ಥಕ್ಷೇತ್ರಗಳ ದರ್ಶನ,ಪೂಜನ ವೀರಶೈವ, ಲಿಂಗಾಯತರಿಗೆ ನಿಷಿದ್ದವೆಂದು ಇಲ್ಲಿ ಹೇಳಿದ್ದಾರೆ. ಅಕ್ಕನವರು ಈ ಧರ್ಮದ ವಕ್ತಾರರಾಗಿ, ಗುರುಗಳಾಗಿ ಹೀಗೆ ಅಧಿಕೃತವಾಗಿ ಮಾತನಾಡಿರುವುದು ಅವರು ಈಧರ್ಮವನ್ನು ಎಷ್ಟೊಂದು ಕರಾರುವಾಕ್ಕಾಗಿ ಆಚರಿಸಿದ್ದಾರೆ ಎಂಬುದಕ್ಕೆ ಉದಾಹರಣೆಯಾಗಿದೆ. ಇಷ್ಟಲಿಂಗದ ಮಹತ್ವ ಸಾರಲು ಅವರು ಕೊಡುವ ದೃಷ್ಟಾಂತ ಅತ್ಯಂತ ಮಾರ್ಮಿಕವಾಗಿದೆ. ಬೆಣ್ಣೆ ಬೇಕು ಎಂದು ಹುಡು ಕುತ್ತಿದ್ದರಂತೆ . ಆದರೆ ಅವರ ಮನೆಯಲ್ಲಿಯೆ ಬೇಕಾದಷ್ಟು ಹಾಲಿತ್ತಂತೆ. ಹಾಗೆ ಕರಸ್ಥಲದಲ್ಲಿಯೇ ಇಷ್ಟಲಿಂಗವಿರುವಾಗ ದೇವರ ಅನುಗ್ರಹಕ್ಕಾಗಿ ಬೇರೆ ತೀರ್ಥಕ್ಷೇತ್ರಗಳಿಗೆ ಹೋಗುವ ಅಗತ್ಯವಿಲ್ಲ. ಗುರು ನಮಗೆ ಇಷ್ಟಲಿಂಗವನ್ನು ಕೊಟ್ಟಿದ್ದಾರೆ. ಇಷ್ಟ ಲಿಂಗದ ಪ್ರಸಾದವನ್ನು ತೆಗೆದುಕೊಂಡಿದ್ದೇವೆ. ಗುರುಬೋಧೆಯನ್ನು ತೆಗೆದುಕೊಂಡಿದ್ದೇವೆ.ಹೀಗಿರುವಾಗ ಅನ್ಯ ಬೋಧೆ, ಅನ್ಯಕ್ಷೇತ್ರ, ಅನ್ಯದೈವ ಇವುಗಳ ಭಕ್ತಿ ಅಗತ್ಯ ವಿಲ್ಲ. ಇಷ್ಟಲಿಂಗವಿದ್ದಂತೆ ಗುಡಿಲಿಂಗಕ್ಕೆ ಭಕ್ತಿಮಾಡಿದರೆ ನೂರು ನಾಯಿ ಜನ್ಮಗಳು ಬರುತ್ತವೆ ಎಂದು ಶಿವಧರ್ಮಪುರಾಣ ಹೇಳುತ್ತದೆ. ಆದುದರಿಂದ ಗುರು ಕೊಟ್ಟಿರುವ ಇಷ್ಟ ಲಿಂಗದಲ್ಲಿಯೆ ಭಕ್ತಿಮಾಡಿ ಅನುಗ್ರಹವನ್ನು ಪಡೆಯಬೇಕು. ಹೀಗಲ್ಲದೆ ಗುರುಕೊಟ್ಟಲಿಂಗವನ್ನು ಹಗುರವಾಗಿ ತಿಳಿದು ತೀರ್ಥಲಿಂಗವನ್ನು ಹಿರಿದಾಗಿ ಭಾವಿಸುವವರಿಗೆ ಅಘೋರ ನರಕ ಬರುವುದು. ಎಂದು ಶಿವಧರ್ಮಪುರಾಣವೆ ಹೇಳಿದೆ
ಎಲ್ಲಧರ್ಮಗಳಲ್ಲಿ ಆರಾಧನೆ. ಭಕ್ತಿವಿಚಾರದಲ್ಲಿ ಅವರವರ ಧರ್ಮದಲ್ಲಿ ಭಕ್ತಿಶ್ರದ್ದೆಗಳಿವೆ . ವೀರಶೈವಲಿಂಗಾಯತರಿಗೆ ತಮ್ಮ ಧರ್ಮದ ತಿಳಿವಳಿಕೆ ಇಲ್ಲ. ಅಂದರೆ ಧರ್ಮಗುರುಗಳಾದವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿಲ್ಲ. ಈ ಧರ್ಮಕ್ಕೆ ಹೊರಗಿನವರು ಬಂದು ಸೇರಿಕೊಂಡ ಕಾಲಕ್ಕೆ ಅದು ಇದು ಎಲ್ಲ ಆಚರ ಣೆಗಳನ್ನು ಮುಂದುವರಿಸಿದರು. ಧರ್ಮಗುರುಗಳಾದವರು ಕೂಡ ತಮ್ಮ ಧರ್ಮ
ಸರಿಯಾಗಿ ಪಾಲಿಸದೆ ಈ ಧರ್ಮವು ಹ್ರಾಸವಾಗಲು ಕಾರಣರಾಗಿದ್ದಾರೆ ಎಂದು ಹೇಳಬಹುದು. ಧರ್ಮನಿಷ್ಠೆ ತತ್ವನಿಷ್ಠೆಗಳನ್ನು ಗುರುಗಳಾದವರು ಮೊದಲು ಪಾಲಿಸಬೇಕು. ಗುರುಗಳೆ ಧರ್ಮವಿರುದ್ದವಾಗಿ ನಡೆದರೆ ಹೇಳುವವರಾರು?

**11) ಹಂದಿಯೂ, ಮದಕರಿಯೂ ಒಂದೆ ದಾರಿಯಲ್ಲಿ ಸಂಧಿಸಿದಡೆ,**
**ಹಂದಿಗಂಜಿ ಮದಕರಿ ಕೆಲಕ್ಕೆ ಸಾರಿದರೆ,**

ಹೀಹಂದಿ ಕೇಸರಿಯಪ್ಪುದೆ ಚೆನ್ನಮಲ್ಲಿಕಾರ್ಜುನಾ.

### ಪದಗಳ ಅರ್ಥ

ಮದಕರಿ-ಮದಿಸಿದ ಆನೆ,
ಕೇಸರಿ-ಸಿಂಹ,
ಕೆಲಕ್ಕೆ-ಪಕ್ಕಕ್ಕೆ.
ಸಾರ್-ಸರಿದರೆ,ಪಕ್ಕಕ್ಕೆ

### ವಚಪದ ಅರ್ಥ

ಹಂದಿಯೂ ಮದಕರಿಯೂ ಒಂದೆ ದಾರಿಯಲ್ಲಿ ಸಂಧಿಸಿದಡಿಡೆ ಹಂದಿಗಂಜಿ ಮದಕರಿ ಕೆಲಕ್ಕ ಸಾರಿದರೆ, ಹಂದಿ ಆನೆ ಒಂದೆ ದಾರಿಯಲ್ಲಿ ಬಂದರೆ ಆನೆಯೆ ಪಕ್ಕಕ್ಕೆ ಸರಿದು ದಾರಿಬಿಟ್ಟರೆ ಹಂದಿಯು ಸಿಂಹವಾಗಿಬಿಡುವುದೆ?ಇಲ್ಲ. ಹಾಗೆ
ದುರ್ಜನರಿಗೆ ಸಜ್ಜನರು ದಾರಿಬಿಟ್ಟು ಪಕ್ಕಕ್ಕೆ ಹೋದರೆ ದುರ್ಜನ ದೊಡ್ಡವನಾಗುವುದಿಲ್ಲ. ಇಲ್ಲಿ ಹಂದಿ, ಆನೆ ರೂಪಕಗಳನ್ನು ಗಮನಿಸಿ. ಮೊದಲು ಹಂದಿಯ ಗುಣಸ್ವಭಾವವನ್ನು ಗಮನಕ್ಕೆ ತಂದುಕೊಳ್ಳಿ. ಆನೆಯ ಗುಣಸ್ವಭಾವವನ್ನು ಈಗ ಗಮನಕ್ಕೆ ತಂದುಕೊಳ್ಳಿ. ಆನೆಯ ಗಾಂಭೀರ್ಯ, ಎತ್ತರ, ನಡಿಗೆ, ಅದರ ಆಹಾರ ಪದ್ಧತಿಯನ್ನು ಗಮನಿಸಿ. ಆದರೂ ಅದು ಹಂದಿ ಎದುರಾದಾಗ ಸುಮ್ಮನೆ ತಾನೆ ತುಸು ಪಕ್ಕಕ್ಕೆ ಸರಿಯುತ್ತದೆ. ರಾಜ ಕೌಶಿಕನನ್ನು ಅವನ ಹೀನಗುಣದೊಂದಿಗೆ ಹಂದಿಯೊಂದಿಗೆ ಅಭೇದ ಮಾಡಿ ನೋಡಿರಿ. ಇಲ್ಲಿ ಅಕ್ಕನವರ ವಿಚಾರ, ಎತ್ತರ, ಸಹಿಷ್ಣುತೆ, ಅಪಾರ ಭಕ್ತಿ,ತ್ಯಾಗ, ಅರಿವಿನ ವಿಸ್ತಾರ ಇವನ್ನು ಆನೆಯೊಂದಿಗೆ ಹೋಲಿಸಿ. ಅವರು ಸುಮ್ಮನೆ ರಾಜನಿಂದ ಸರಿದು ಹೋದರು. ಈವಚನವನ್ನು ಅವಲೋಕನ ಮಾಡಿರಿ. ಲೋಕದಲ್ಲಿ ದುಷ್ಟರ ಉಪಟಳ ಮೇರೆಮೀರಿರುತ್ತದೆ. ದುಷ್ಟರದು ಪ್ರಚಾರ, ಆರ್ಭಟ ಬಹಳ ಸಜ್ಜನರು ಇದ್ದರೂ ಇಲ್ಲದಂತೆ ಇರುತ್ತಾರೆ. ಹಾಗೆಂದು ದುಷ್ಟರು ಎಂದೂ ದೊಡ್ಡ
ವರಾಗುವುದಿಲ್ಲ. ಇಲ್ಲಿ ದುಷ್ಟರಾಜನ ಉಪಟಳ ಇಂಥದು.

12) ಹೂವು ಕಂದಿದಲ್ಲಿ ಪರಿಮಳವನರಸುವರೆ?

ಕಂದನಲ್ಲಿ ಕುಂದನರಸುವರೆ? ಎಲೆ ದೇವಾ,
ಸ್ನೇಹವಿದ್ದಠಾವಿನೊಳು ದ್ರೋಹವಾದ ಬಳಿಕ, ಮರಳಿ
ಸದ್ಗುಣವನರಸುವರೆ? ಎಲೆ ದೇವಾ
ಬೆಂದ ಹುಣ್ಣಿಂಗೆ ಬೇಗೆಯನಿಕ್ಕುವರೆ? ಚೆನ್ನಮಲ್ಲಿಕಾರ್ಜುನಾ,
ಹೊಳೆಯಿಳಿದಡೆ ಅಂಬಿಗಂಗೇನುಂಟು?

## ವಚನದ ಅರ್ಥ

ಹೂವು ಕಂದಿದಲ್ಲಿ ಪರಿಮಳವನರಸುವರೆ? ಕಂದನಲ್ಲಿ ಕುಂದನರಸುವರೆ? ಹೂ ಬಾಡಿದಾಗ ಪರಿಮಳವನುಡುಕುವರೆ? ನಿನ್ನ ಮಗುವಿನಲ್ಲಿ ದೋಷವ ನೋಡುವರೆ? ಎಲೆ ದೇವ ಸ್ನೇಹವಿದ್ದ ಠಾವಿನೊಳು ದ್ರೋಹವಾದ ಬಳಿಕ ಮರಳಿ ಸದ್ಗುಣವನ ರಸುವರೆ?ಸ್ನೇಹ,ವಿಶ್ವಾಸವಿಟ್ಟ ಸ್ಥಳದಲ್ಲಿ ದ್ರೋಹವಾಯಿತು. ಮತ್ತೆ ಅಲ್ಲಿ ಸದ್ಗುಣವನ್ನು ನೋಡುವರೆ?ಎಲೆ ದೇವ ಬೆಂದ ಹುಣ್ಣಿಂಗೆ ಬೇಗೆಯನಿಕ್ಕುವರೆ? ದೇವನೆ ಬಹಳ ನೋವಾಗಿರುವ ಗಾಯಕ್ಕೆ ಕಾಯಿಸಿ ಬರೆ ಹಾಕುವರೆ? ಚೆನ್ನಮಲ್ಲಿಕಾರ್ಜುನ ಹೊಳೆಯಿಳಿದಡೆ ಅಂಬಿಗಂಗೇನುಂಟು? ಪರಮಾತ್ಮನೆ ಪ್ರವಾಹ ಇಳಿದಮೇಲೆ ಅಂಬಿಗನಿ ಗೇನು ದೊರೆವುದು. ಪರಮಾತ್ಮನಲ್ಲಿ ಅಂತರಂಗ ತೆರೆದಿಡುತ್ತಿದ್ದಾರೆ.ನಾಲ್ಕು ಉಪಮಗಳ ಮೂಲಕ ವಿವರಿಸುತ್ತಿದ್ದಾರೆ. ಹೂವು ಬಾಡಿದ ಮೇಲೆ ಪರಿಮಳ ದೊರೆ ಯುವುದಿಲ್ಲ. ಮಗುವಿನಲ್ಲಿ ದೋಷವನುಡುಕಬಹುದೆ? ಮಗುವಿನ ದೋಷವೆ ಸೊಗಸು. ಎಲ್ಲಿ ಗೆಳೆತನವಿದೆ ಅಲ್ಲಿ ದ್ರೋಹವಾದಮೇಲೆ ಮತ್ತೆ ಗೆಳೆತನವುಂಟೆ? ಗಾಯ ಮೊದಲೆ ಕೀತಿದೆ. ಮತ್ತೆ ಅದರ ಮೇಲೆ ಬರೆ ಹಾಕಬಹುದೆ? ಚೆನ್ನಮಲ್ಲಿ ಕಾರ್ಜುನನೆ ಅಂಬಿಗನಿಗೆ ಹೊಳೆ ಇದ್ದಾಗ ಸಂಪಾದನೆ ಹೊಳೆ ಇಳಿದಮೇಲೆ ಅಂಬಿಗನನ್ನು ಕೇಳುವವರಾರು? ನನಗೆ ಪರಮಾತ್ಮನ ಭಕ್ತಿ ಈಗ ಅಪರಿಮಿತವಾಗಿ ಉಂಟಾಗಿದೆ ಈಭಕ್ತಿಯ ಒರತೆ ಇಳಿದ ಮೇಲೆ ಭಕ್ತಿಯೂ ಹೋಗಿಬಿಡುತ್ತದೆ. ಈಗಲೆ ನೀನು ಅನುಗ್ರಹಿಸು. ಬೇಡಿದ್ದಾರೆ ಅಕ್ಕಮಹಾದೇವಿಯವರು. ನನ್ನ ಜೀವನವೆ ಮುಗಿದ ಮೇಲೆ ನೀನು ಅನುಗ್ರಹಿಸಿದರೆಷ್ಟು? ಬಿಟ್ಟರೆಷ್ಟು ?

13) ಹಡೆವುದರಿದು ನರಜನ್ಮವ, ಹಡೆವುದರಿದು ಗುರುಕಾರುಣ್ಯವ.
ಹಡೆವುದರಿದು ಗುರುಲಿಂಗ ಜಂಗಮಸೇವೆಯ.

ಹಡೆವುದರಿದು ಸತ್ಯಶರಣರ ಅನುಭಾವವ
ಚೆನ್ನಮಲ್ಲಿಕಾರ್ಜುನಯ್ಯನ ಶರಣರ ಅನುಭಾವದಲ್ಲಿ ನಲಿದಾಡು
ಕಂಡೆಯಾ ಎಲೆಮನವೆ.

## ಪದಗಳ ಅರ್ಥ

ಅರಿದು-ಅಸಾಧ್ಯ ತಿಳಿಯದು.
ಕಾರುಣ್ಯ-ಅನುಗ್ರಹ, ದಯೆ,
ಅನುಭಾವ-ದರ್ಶನ

## ವಚನದ ಅರ್ಥ

ಹಡೆವುದರಿದು ನರಜನ್ಮವ. ಹಡೆವುದರಿದು ಗುರುಕಾರುಣ್ಯವ. ಮನುಷ್ಯ ಜನ್ಮ ಪಡೆಯುವುದು ಅಪೂರ್ವವಾದುದು. ಗುರುವಿನ ಕರುಣೆ ಅನುಗ್ರಹವನ್ನು ಪಡೆ ಯುವುದೂ ಅಪೂರ್ವವೆ. ಹಡೆವುದರಿದು ಗುರುಲಿಂಗಜಂಗಮಸೇವ ಗುರುಲಿಂಗಜಂಗಮದ ಸೇವೆಯನ್ನು ಪಡೆಯುವುದೂ ಅಪೂರ್ವ. ಪೂರ್ವ ಪುಣ್ಯ. ಹಡೆವುದರಿದು ಸತ್ಯ ಶರಣರ ಅನುಭಾವವ. ಸತ್ಯ ಸಾಕ್ಷಾತ್ಕಾರ ಮಾಡಿಕೊಂಡ ಮಹಾತ್ಮರ ಅನುಭಾವ ಸಿಗುವುದು ಮತ್ತೂ ಅಪೂರ್ವ ಚೆನ್ನಮಲ್ಲಿಕಾರ್ಜುನಯ್ಯನ ಶರಣರ ಅನುಭಾವದಲ್ಲಿನಲಿದಾಡುಕಂಡೆಯಾ ಮನವೆ. ಆದುದರಿಂದ ಜೀವನವೆಲ್ಲ ಈ ಮಹಾತ್ಮರ ಸನ್ನಿಧಿಯಲ್ಲಿದ್ದು ಅನುಭಾವ ಕೇಳುತ್ತ ಹೇಳುತ್ತನಲಿದಾಡು ಇದೆ ಜೀವನ ಆನಂದ . ಮನುಷ್ಯಜನ್ಮ ಪಡೆದು ಬಂದಿದ್ದೇವೆ. ಇದು ಅಪೂರ್ವ. ಮತ್ತೆ ಇದನ್ನು ಪಡೆಯುವು ಅಸಾಧ್ಯ. ಮಹಾತ್ಮರ ಶರಣರ ದರ್ಶನದೊರೆಯುವುದೂ ಅಪೂರ್ವ. ಮಹಾತ್ಮರ ಅನುಭಾವ ದೊರೆಯುವುದೂ ಅಪೂರ್ವ.ಗುರುಲಿಂಗ ಜಂಗಮಸೇವೆಯು ದೊರೆಯುವದೂ ಅಪೂರ್ವವೇ.ಇಂತಹ ಮಹಾತ್ಮರ ಸೇವೆ ಸಿಗುವುದಂತೂ ದುರ್ಲಬ. ಎಲೆ ಮನಸ್ಸೆ ನೀನು ಇಂತಹ ಮಹಾತ್ಮರ ಸನ್ನಿಧಿಯಲ್ಲಿದ್ದುಕೊಂಡು ನಲಿದಾಡು. ಇದು ಭಾಗ್ಯ. ಈಸೇವೆಯೂ ಭಾಗ್ಯ. ಈದರ್ಶನವೂ ಭಾಗ್ಯ. ಈಅನುಭಾವಗೋಷ್ಠಿಯೂ ಜನ್ಮ ಜನ್ಮದ ಭಾಗ್ಯ. ಆದುದರಿಂದ ನಲಿದಾಡು ಕುಣಿದಾಡು. ಆನಂದ ಹೊಂದು. ಮನುಷ್ಯ ಜನ್ಮಗುರುದರ್ಶನ, ಗುರುಕಾರುಣ್ಯ, ಗುರುಲಿಂಗಜಂಗಮಸೇವೆ, ಮಹಾಶರಣರ ಅನುಭಾವಗೋಷ್ಟಿ ಇವೆಲ್ಲವೂ ಒಂದೇ ಜನ್ಮದಲ್ಲಿ ಸಿಕ್ಕಿವೆ ಕುಣಿ, ಜಿಗಿ, ನಲಿದಾಡು. ಇದುಭಾಗ್ಯ. ಇದು ಭಾಗ್ಯ.

14) ಹೆದರದಿರುಮನವೆ, ಬೆದರದಿರು ಮನವೆ
ನಿಜವನರಿದು ನಿಶ್ಚಿಂತನಾಗು ಎಲೆ ಮನವೆ
ಫಲವಾದ ಮರನ ಇಡುವರೊಂದು ಕೋಟಿ
ಎಲವದ ಮರನ ಇಡುವರೊಬ್ಬರನು ಕಾಣೆ.
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ.
ನಿಮ್ಮ ಶರಣರ ನುಡಿಯೆ ಎನಗೆ ಗತಿಮತಿ ಸೋಪಾನ.
ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ಇಡು-ಹೊಡೆ,
ಎಲವದಮರ-ಫಲಕೊಡದ ನೆರಳನ್ನೂ ಕೊಡದ ಮುಳ್ಳಿನ ಮರ.

## ವಚಪದ ಅರ್ಥ

ಹೆದರದಿರು ಮನವೆ ಬೆದರದಿರು ಮನವೆ ನಿಜವನರಿದು ನಿಶ್ಚಿಂತನಾಗು ಎಲೆ ಮನವೆ .ಏ ಮನಸ್ಸೇ ನೀನು ಹೆದರಬೇಡ. ಬೆದರಬೇಡ. ನಿಜ ಸಂಗತಿಯನ್ನು ತಿಳಿದುಕೊ ನಿಶ್ಚಿಂತೆಯಿಂದಿರು. ಚಿಂತಿಸಬೇಡ. ಫಲವಾದ ಮರನ ಇಡುವರೊಂದು ಕೋಟಿ . ಎಲವದ ಮರನ ಇಡುವರೊಬ್ಬರ ಕಾಣೆ. ಹಣ್ಣು ಕೊಡುವ ಮರವನ್ನು ಒಂದು ಕೋಟಿ ಜನರು ಕಲ್ಲಿನಲ್ಲಿ ಹೆಂಟೆಯಲ್ಲಿ,ಕೊನೆಗೆ ಸಿಕ್ಕಿದ್ದರಲ್ಲಿ ಹೊಡೆಯುತಾರೆ. ಮರದತ್ತ ಕಲ್ಲು ತೂರುತ್ತಾರೆ . ಯಾಕೆ ಫಲಕ್ಕಾಗಿ. ಆದೆ ಎಲವದ, ಮುಳ್ಳಿ ನಮರಕ್ಕೆ ಯಾರೂ ಹೊಡೆಯುವುದಿಲ್ಲ. ಕಲ್ಲು ತೂರುವುದಿಲ್ಲ. ಹತ್ತಿರವೂ ಹೋಗುವುದಿಲ್ಲ. ಭಕ್ತಿಯುಳ್ಳವರ ಬೈವರೊಂದು ಕೋಟಿ. ಭಕ್ತಿಯಿಲ್ಲದವರ ಬೈವ ರೊಬ್ಬರ ಕಾಣೆ. ಯಾರು ಭಕ್ತಿ ಮಾಡುತ್ತಾರೆ ಅವರನ್ನು ಬೈಯಲು ಒಂದು ಕೋಟಿ ಜನರು ಇರುತ್ತಾರೆ. ಯಾರು ಭಕ್ತಿಯನ್ನೆ ಮಾಡುವುದಿಲ್ಲ, ದುಷ್ಟರು ಅವರನ್ನು ಯಾರೂ ಬೈಯಲು ಹೋಗುವುದಿಲ್ಲ. ಬೈದರೆ ಅವನು ಇವರ ಹಲ್ಲು ಮುರಿದು ಬಿಡುತ್ತಾನೆ. ಇದು ಲೋಕ ; ಸಜ್ಜನರನ್ನು ಅನ್ನುತ್ತದೆ. ದುಷ್ಟರು ಏನೂ ಮಾಡಿದರೂ ಸುಮ್ಮನಿರುತ್ತರೆ. ಚೆನ್ನಮಲ್ಲಿಕಾರ್ಜುನಾ ನಿಮ್ಮಶರಣರ ನುಡಿಯೆ ಎನಗೆ ಗತಿ ಮತಿ ಸೋಪಾನ. ಪರಮಾತ್ಮನೆ

ನಿಮ್ಮ ಶರಣರ ನುಡಿಗಳೇನಿವೆ ಅವು ನನಗೆ ಮೋಕ್ಷ ಬುದ್ದಿ, ಮೆಟ್ಟಿಲುಗಳು. ಅಕ್ಕಮಹಾದೇವಿಯವರು ಉಡುತಡಿಯಿಂದ ನಿರ್ಗಮಿ ಸಿದ ನಂತರ ಅವರ ಬಗೆಗೆ ಲೋಕದ ಜನರು ಕಥೆಕಟ್ಟಿ ಮಾತನಾಡತೊಡಗಿದರು. ಇಂತಹ ಲೋಕದ ಮಾತುಗಳನ್ನು ಕೇಳಿ ಕೇಳಿ ಸಾಕಾಗಿ ತಮ್ಮನ್ನು ತಾವು ಸಮಾಧಾನಿಸಿಕೊಂಡ ವಚನವಿದು, ಎಲೆ ಮನಸ್ಸೆ ಹೆದರಬೇಡ, ಅಧೈಯ್ಯಗೆಡಬೇಡ. ಲೋಕ ಹೀಗೆಯೆ. ಸಹಜ ಅದಕ್ಕೆ ರುಚಿಸುವುದಿಲ್ಲ. ನಿಜ ಸತ್ಯ ಅವರಿಗೆ ಬೇಕಾಗಿಯೂ ಇಲ್ಲ. ಇದನ್ನು ತಿಳಿದುಕೊಂಡು ನಿಶ್ಚಿಂತಳಾಗು. ಯಾವ ಮರ ಫಸಲು, ನೆರಳು ಕೊಡುತ್ತದೆ . ಅದಕ್ಕೆ ಕಲ್ಲು ತೆಗೆದುಕೊಂಡು ಹೊಡೆಯುವವರು ಬಹಳ. ಮಾವಿನಮರದ ಫಸಲಿಗಾಗಿ ಕಲ್ಲಿನಿಂದ ಹೊಡೆಯುತ್ತಾರೆ. ಕೊಂಬೆರೆಂಬೆಗಳನ್ನು ಮುರಿದು ಕಡಿದು ಒಯ್ಯುತ್ತಾರೆ. ಅದೇ ಮುಳ್ಳಿನ ಮರಕ್ಕೆ ಯಾರೂ ಹೊಡೆಯುವುದೂ ಇಲ್ಲ. ಕಡಿಯುವುದೂ ಇಲ್ಲ. ಹತ್ತಿರ ಕೂಡ ಯಾರೂ ಹೋಗುವುದಿಲ್ಲ. ಇದು ಲೋಕ. ಯಾರು ಭಕ್ತಿ ಮಾಡುತ್ತಾರೆ ಅವರನ್ನು ಈ ಜನರು ನೂರು ಮಾತು ಅನ್ನುತ್ತಾರೆ. ಯಾರು ಭಕ್ತಿಮಾಡುವುದಿಲ್ಲ ಅವರನ್ನು ಏನೂ ಅನ್ನುವುದಿಲ್ಲ. ತಿರುಗಿಯೂ ಅವರ ಕಡೆ ನೊಡುವುದಿಲ್ಲ. ಭಕ್ತಿ ಮಾಡುವವರನ್ನು ಬೈಯಲು ಒಂದು ಕೋಟಿ ಜನರಿರುತ್ತಾರೆ. ಭಕ್ತಿಮಾಡದವರನ್ನು ಏನಯ್ಯ ನೀನು ಯಾಕೆ ಭಕ್ತಿ ಮಾಡು ವುದಿಲ್ಲ ಎಂದು ಕೇಳುತ್ತಾರೆಯೆ ಇಲ್ಲ. ಇದುಲೋಕ. ಆದುದರಿಂದ ನನಗೆ ಶರಣರ ವಚನಗಳು ಅವರ ನಡೆ, ನುಡಿಗಳು ನನಗೆ ಪರಮಾತ್ಮನನ್ನು ಸೇರುವ ಮೆಟ್ಟಿ ಲುಗಳು. ಅವರೆ ನನಗೆ ದಿಕ್ಕು. ಅವರೆ ನನಗೆ ಬುದ್ದಿ. ಅವರೆ ನನಗೆ ಮೋಕ್ಷ ಅವರೆ. ನನಗೆ ಆದರ್ಶ.

15) ಹೊಳೆವ ಕೆಂಜೆಡೆಯ ಮೇಲೆ ಎಳೆವೆಳುದಿಂಗಳು
ಫಣಿಮಣಿ ಕರ್ಣಕುಂಡಲ ನೋಡವ್ವ. ರುಂಡಮಾಲೆಯ
ಕೊರಳವನ ಕಂಡರೆ ಬರ ಹೇಳವ್ವ.
ಗೋವಿಂದನ ನಯನ ಉಂಗುಟದ ಮೇಲಿಪ್ಪುದು.
ಚೆನ್ನಮಲ್ಲಿಕಾರ್ಜುನ ದೇವಂಗಿದು ಕುರುಹವ್ವಾ.

## ವಚನದ ಅರ್ಥ

ಕೆಂಜೆಡೆ-ಕೆಂಪುಗೂದಲಿನ ಜಡೆ. ಎಳುವೆಳದಿಂಗಳು
ಬಾಲಚಂದ್ರನನ್ನು ಧರಿಸಿ ದವ.
ಫಣಿಮಣಿ- ಸರ್ಪಾಭರಣ ಮಾಡಿಕೊಂಡವನು. ಕರ್ಣಕುಂಡಲ-
ಕರ್ಣಾ ಭರಣ .
ಉಂಗುಟ-ಬಲಗಾಲಿನ ಹೆಬ್ಬೆರಳು.
ಕುರುಹು-ಗುರುತು.

## ವಚಪದ ಅರ್ಥ

ಹೊಳೆವಕೆಂಜೆಡೆಯ ಮೇಲೆ ಎಳುವೆಳದಿಂಗಳು, ಪ್ರಕಾಶಿಸುವ ಕೆಂಪು
ತಲೆಗೂದಲಿನ ಮೇಲೆ ಬಾಲಚಂದ್ರನಿದ್ದಾನೆ.ಫಣಿಮಣಿ ಕರ್ಣಕುಂಡಲ ನೋಡವ್ವಾ. ಹಾವಿನ ತಲೆಯಲ್ಲಿರುವ ಫಣಾಮಣಿಯನ್ನೆ ಕರ್ಣಕುಂಡಲವಾಗಿ ಧರಿಸಿದ್ದಾನೆ. ರುಂಡಮಾಲೆಯ ಕೊರಳವನ ಕಂಡರೆ ಒಮ್ಮೆ ಬರಹೇಳವ್ವಾ. ತನ್ನ ಕೊರಳಿನಲ್ಲಿ ಮುಕ್ತಾತ್ಮರಾದ ತನ್ನ ಭಕ್ತರ ಕೊರಳನ್ನೆ ರುದ್ರಾಕ್ಷಮಾಲೆಯನ್ನಾಗಿ ಮಾಡಿಕೊಂಡು ಧರಿಸಿದ್ದಾನೆ. ಶಿವನನ್ನು ನೀವು ನೋಡಿದರೆ ಕರೆಕಳುಹಿಸಿದೆನೆಂದು ಅವನಿಗೆ ತಿಳಿಸಿರಿ. ಗೋವಿಂದನ ನಯನ ಉಂಗುಟದ ಮೇಲಿಪ್ಪುದು. ಶಿವನ ಅನುಗ್ರಹ ಗಳಿಸಲು ಅರ್ಪಿ ಸಿದ ವಿಷ್ಣುವಿನ ಕಣ್ಣು ಶಿವನ ಬಲಗಾಲ ಹೆಬ್ಬೆರಳಿನ ತುದಿಯಲ್ಲಿದೆ. ಚೆನ್ನಮಲ್ಲಿಕಾ ರ್ಜುನ ದೇವಂಗಿದು ಕುರುಹವ್ವಾ. ಇದು ನನ್ನ ನಲ್ಲ ನಾದ ಚೆನ್ನಮಲ್ಲಿಕಾರ್ಜುನ ದೇವರ ಗುರುತು. ಯಾರು ಚೆನ್ನಮಲ್ಲಿಕಾರ್ಜುನ ? ಅವನ ಗುರುತೇನು? ಎಂದು ಆತ್ಮೀಯವಾಗಿ ಗೆಳತಿಯರು ಕೇಳಿದಾಗ ಚೆನ್ನಮಲ್ಲಿಕಾರ್ಜುನನ ಚಹರೆ, ಸ್ವರೂಪವನ್ನು ಈ ವಚನದಲ್ಲಿ ವಿವರಿಸಿದ್ದಾರೆ. ವಚನದಲ್ಲಿ ಶಿವನ ವರ್ಣನೆ ವಿಶೇಷವಾಗಿದೆ. ಇದ್ದವರಿಗೆ ತನ್ನ ನಲ್ಲನ ಪ್ರತಿಯೊಂದು ಚಹರೆಯೂ ಅತಿಶಯವಾಗಿಯೆ ಕಾಣು ತ್ತವೆ. ಅತನದು ಪ್ರಕಾಶಿಸುವ ಕೆಂಗೂದಲು. ಎಳೆಯ ಚಂದ್ರನನ್ನು ಮುಡಿಯಲ್ಲಿ - ಧರಿಸಿದ್ದಾನೆ. ಹಾವಿನಹೆಡೆಯ ಮಣಿಯೆ ಅವನಿಗೆ ಕರ್ಣಕುಂಡಲವಾಗಿದೆ. ಅವನ ಧೈರ್ಯ್ಯ ಎಷ್ಟು? ಸರ್ಪರಾಜ ಆತ. ನಾವು ಸರ್ಪಭೀತರು. ಶಾಂತ ಚಂದ್ರನನ್ನು ಧರಿಸಿದ ಪ್ರಶಾಂತನಾತ. ರುಂಡಮಾಲಾಧರನಾತ. ತನ್ನ ಭಕ್ತರನ್ನು ತನ್ನಕೊರಳಿನಲ್ಲಿ ಸ್ಥಾನ ನೀಡಿ ಧರಿಸಿಕೊಂಡಾತ. ಭಕ್ತಜನಬಂಧು. ಕಾರುಣ್ಯಸಿಂಧು. ದಯಾಘನ. ಗೋವಿಂದನಂತಹ

ಭಕ್ತರೂ ಅವನಿಗಿದ್ದಾರೆ. ಈ ಗೋವಿಂದನು ತನಗೆ ವೈಕುಂಠ ವನ್ನು, ಚಕ್ರವನ್ನು ಪಡೆಯಲು ನನ್ನ ಶಿವನನ್ನು ಕುರಿತು ತಪಸ್ಸು ಮಾಡಿದನು. ಶಿವ ನು ಪ್ರತ್ಯಕ್ಷನಾಗದಿದ್ದಾಗ ತನ್ನ ಒಂದು ಕಣ್ಣನ್ನೆ ಕಿತ್ತು ಶಿವನ ಬಲಗಾಲ ಹೆಬ್ಬೆರಳ ಮೇಲೆ ಅರ್ಪಿಸಿದನು. ಆಗಲೂ ಶಿವನು ಪ್ರತ್ಯಕ್ಷನಾಗದಿದ್ದಾಗ ಇನ್ನೊಂದು ಕಣ್ಣು ಕೀಳು ವಷ್ಟರಲ್ಲಿ ಶಿವನುಪ್ರತ್ಯಕ್ಷನಾಗಿ ಅನುಗ್ರಹಿಸಿದನು. ಈ ದೇವಾದಿದೇವನು ನನ್ನ ನಲ್ಲ. ಇದು ಅವನ ಪರಿಚಯ. ಈತನೊಂದಿಗೆ ನನ್ನ ಮದುವೆ. ಅಕ್ಕಮಹಾದೇವಿ ಯವರಿಗೆ ಚೆನ್ನಮಲ್ಲಿಕಾರ್ಜುನನೊಂದಿಗೆ ಲಗ್ನವಾಗುವ ಹಿರಿಯಾಸೆ ಬಲವತ್ತರ.

16) ಹಗಲಿನ ಕೂಟಕ್ಕೆ ಹೋರಿ ಬೆಂಡಾದೆ. ಇರುಳಿನ ಕೂಟಕ್ಕೆ ಇಂಬರಿದು ಹತ್ತಿದೆ.
ಕನಸಿನಲಿ ಮನಸಂಗವಾಗಿ ಮೈಮರೆದಿರ್ದೆ. ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆ.

### ಪದಗಳ ಅರ್ಥ

ಹೋರಿ-ಸುಖಿಸಿ.
ಕೂಟ-ರತಿಭೋಗ.
ಇಂಬು-ಅವಕಾಶ.

### ವಚನದ ಅರ್ಥ

ಹಗಲಿನ ಕೂಟಕ್ಕೆ ಹೋರಿ ಬೆಂಡಾದೆ. ಇರುಳಿನ ಕೂಟಕ್ಕೆ ಇಂಬರಿದು ಹತ್ತಿದೆ. ಹಗಲು ನಿನ್ನೊಂದಿಗೆ ಸುಖಿಸಿ ದಣಿದೆ. ಇರುಳಿನ ಸುಖದಲ್ಲಿ ಸುಖಿಸಿ ನಿದ್ರಿಸಿದೆ. ಕನಸಿನಲಿ ಮನಸಂಗವಾಗಿ ಮೈಮರೆದಿರ್ದೆ. ನನಗೊಂದು ಕನಸಾಯಿತು. ಆಕನಸಿನಲ್ಲಿ ನನ್ನ ಮನಸ್ಸು ನಿನ್ನ ಸಂಗವಾಯಿತು. ಎಚ್ಚರವಿಲ್ಲದಂತೆ ನಾನು ನಿನ್ನೊಂದಿಗೆ ಇದ್ದೆ. ಚೆನ್ನ ಲ್ಲಿಕಾರ್ಜುನನ ಕಂಡು ಕಣ್ದೆರೆದೆ. ಚೆನ್ನಮಲ್ಲಿಕಾರ್ಜುನನೆ ನಿನ್ನನ್ನು ಕಂಡೆ ಎಚ್ಚರಗೊಂಡೆ. ಕನಸಿನಲ್ಲಿ ಮನಸ್ಸು ನಿನ್ನೊಂದಿಗೆ ಸುಖಿಸಿತು.ಇದೆ ಸುಖದಲ್ಲಿ ಚೆನ್ನಮಲ್ಲಿಕಾರ್ಜುನ ನಿನ್ನನ್ನು ಕಂಡೆ ಎಚ್ಚರವಾದೆ.

ಅಕ್ಕಮಹಾದೇವಿಯವರಿಗೆ ಎಚ್ಚರ, ನಿದ್ರೆ, ಸ್ವಪ್ನ ಎಲ್ಲ ಅವಸ್ಥೆಯಲ್ಲು ಪರಮಾತ್ಮನದೆ ಚಿಂತೆ. ಅವರಿಗೆ ಚೆನ್ನಮಲ್ಲಿಕಾರ್ಜುನ ಸರ್ವಸ್ವ, ಆವ ನನ್ನೆ ಹಾಸಿ, ಹೊದ್ದು,ವಿರಮಿಸಿ,ನಲಿದು, ಹಾಡಿ,ಹಾರೈಸಿ,ಸುಖಿಸಿ ಅವನೊಂದಿಗೆ ಏನೆಲ್ಲ ಆಮೋದ,ವಿನೋದಗಳನ್ನು ಅಕ್ಕನವರು ಇಚ್ಚಿಸಿದ್ದಾರೆ. ಸತಿ-ಪತಿಭೋಗೋ ಪಭೋಗದಲ್ಲಿ ಪರಮಾತ್ಮನೊಂದಿಗಿರಲು ಹಿಗ್ಗು.

16) ಹಗಲು ನಾಲ್ಕು ಜಾವ ನಿಮ್ಮ ಕಳವಳಲ್ಲಿಪ್ಪೆನು. ಇರುಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆಯಲಿಪ್ಪೆನು. ಹಗಲಿರುಳು ನಿಮ್ಮ ಹಂಬಲದಲ್ಲಿ ಮೈಮರೆದೊರಗಿದೆನು. ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಒಲುಮೆ ನಟ್ಟು ಹಸಿವು ತೃಷೆ ನಿದ್ರೆಯ ಮರೆದೆನು.

## ಪದಗಳ ಅರ್ಥ

ಒಂದು ಜಾವ-ಮೂರು ಗಂಟೆ.
ಕಳವಳ-ಚಿಂತೆ. ಕನವರಿಕೆ.
ವಿಕಳಾವಸ್ಥೆ-ತುರೀಯ ಅವಸ್ಥೆ.
ಜಾಗ್ರುತ್,ಸ್ವಪ್ನ ಸುಷುಪ್ತಿ ಈ ತ್ರಿವಿಧಾವಸ್ಥೆಯಲ್ಲೂ ಪರಮಾತ್ಮನದೆ ಚಿಂತೆ.

## ವಚನದ ಅರ್ಥ

ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪನು . ಪರಮಾತ್ಮನೆ ಹಗಲು
ಹನ್ನೆರಡು ಗಂಟೆ ನಿಮ್ಮದೆ ಚಿಂತೆಯಲ್ಲಿದ್ದೇನೆ. ಇರುಳು ನಾಲ್ಕು ಜಾವ ಲಿಂಗದ
ವಿಕಳಾವಸ್ಥೆಯಲ್ಲಿಪ್ಪನು. ರಾತ್ರಿ ಹನ್ನೆರಡುಗಂಟೆ ನಿಮ್ಮದೆ ಧ್ಯಾನದಲ್ಲಿದ್ದೇನೆ. ಹಗಲಿರುಳು ನಿಮ್ಮ ಹಂಬಲದಲ್ಲಿ ಮೈಮರೆದೊರಗಿದೆನು. ಹಗಲು ರಾತ್ರಿ ನಿಮ್ಮದೆ ಅಪೇಕ್ಷೆಯಲ್ಲಿ ಕಳವಳಿಸುತ್ತ ಎಚ್ಚರ,ನಿದ್ರೆಯಲ್ಲಿ ದಿನ ಕಳೆಯುತ್ತಿದ್ದೇನೆ. ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಒಲುಮೆ ನಟ್ಟು ಹಸಿವು ತೃಷೆ ನಿದ್ರೆಯ ಮರೆದೆನು. ಚೆನ್ನಮಲ್ಲಿಕಾರ್ಜುನನೆ ನಿಮ್ಮ ಪ್ರೀತಿ ನನ್ನ

ಹೃದಯದಲ್ಲಿ ನಾಟಿ ಹಸಿವು, ಬಾಯಾರಿಕೆ, ನಿದ್ರೆಗಳನ್ನು ಮರೆತು ದಿನ ದೂಡಿದ್ದೇನೆ.ಅಕ್ಕಮಹಾದೇವಿಯವರು ಈಗ ವಿಕಳಾವಸ್ಥೆಯಲ್ಲಿದ್ದಾರೆ. ಸಾಕ್ಷಾತ್ಕಾ ರದ ಹಂಬಲದಲ್ಲಿ ಸಾಧಕನಿಗೆ ಇಂತದೊಂದು ಸ್ಥಿತಿ ಬರುತ್ತದೆ. ಊಟಬೇಡ. ನಿದ್ರೆ ಬೇಡ, ಮಾತು ಬೇಡ. ಬಂಧುಬಳಗ ಬೇಡ. ಕೊನೆಗೆ ತನ್ನ ಬಗೆಗೆ ಕೂಡ ನಿರಾಸಕ್ತಿ ಮೂಡುತ್ತದೆ. ಈಗ ಜೀವನದಲ್ಲಿ ಪರಮಾತ್ಮನ ಹೊರತಾಗಿ ಬೇರೇನೂ ಬೇಡದ ಸ್ಥಿತಿ ಅಕ್ಕಮಹಾದೇವಿಯವರದು. ಏನೆಲ್ಲ ಸಾಧನೆ ಧ್ಯಾನ ಮಾಡಿದರೂ ತೃಪ್ತಿಯಿಲ್ಲ . ಶಾಂತಿ ಇಲ್ಲ .ಕಳವಳ ಸ್ಥಾಯಿಯಾಗಿ ಪರಮಾತ್ಮನ ಮೆಲುಕಿನಲ್ಲಿ ದಿನಗಳು ಸಪ್ಪೆ 'ಯಾಗಿ ಮುಂದೆ ಹೋಗುತ್ತಿವೆ. ಕೆಲವು ಕಾಲ ಈ ದಿನಗಳನ್ನು ಅನಿವಾರವಾಗಿ ಕಳೆಯಬೇಕು: ಆ ನಂತರವೆ ಮತ್ತೆ ಈ ಸಾಧಕನು ಗುರುವಾಗಿ ಈಅನುಭಾವದ ಬೆಳಕನ್ನು ಲೋಕಕ್ಕೆ ನೀಡುತ್ತ ದಿವ್ಯ ಜೀವನ ನಡೆಸುತ್ತಾನೆ.

17) ಹಿಡಿವೆನೆಂದರೆ ಹಿಡಿಗೆ ಬಾರನವ್ವ.
ತಡೆವೆಂದರೆ ಮೀರಿ ಹೋಹನವ್ವ.
ಒಪ್ಪಚ್ಚಿ ಅಗಲಿದಡೆ ಕಳವಳಗೊಂಡೆ
ಚೆನ್ನಮಲ್ಲಿಕಾರ್ಜುನನ ಕಾಣದೆ
ಆನಾರೆಂದರಿಯೆ ಕೇಳಾ ತಾಯೆ.

ವಚನದ ಅರ್ಥ

ಹಿಡಿವೆನೆಂದರೆ ಹಿಡಿಗೆ ಬಾರನವ್ವ. ತಡೆವೆನೆಂದರೆ ಮೀರಿ ಹೋಹನವ್ವ. ಹಿಡಿಯುತ್ತೇನೆ ಎಂದರೆ ಹಿಡಿಗೆ ಬೊಗಸೆಗೆ ಆತ ಸಿಗುವುದಿಲ್ಲ. ತಡೆದು ನಿಲ್ಲಿಸುತ್ತೇನೆ ಎಂದರೆ ಆತ ನನ್ನನ್ನು ಮೀರಿ ಲೆಕ್ಕಕ್ಕಿಡದೆ ಹೋಗಿಬಿಡುತ್ತಾನೆ. ಒಪ್ಪಚ್ಚಿ ಅಗಲಿದಡೆ ಕಳವಳ ಗೊಂಡೆ .ಚೆನ್ನಮಲ್ಲಿಕಾರ್ಜುನನ ಕಾಣದೆ ಆನಾರೆಂದರಿಯೆ ಕೇಳಾ ತಾಯ್ಕೆ, ಒಮ್ಮೆ ಆತ ಅಗಲಿದರೂ ನನಗೆ ದುಗುಡ ಉಂಟಾಗುತ್ತದೆ. ಹೀಗಿರುವಾಗ ಚೆನ್ನಮಲ್ಲಿಕಾರ್ಜು ನ ದೇವರನ್ನು ನಾನು ಕಾಣದೆ, ನನ್ನನ್ನು ನಾನು ಮರೆತಿದ್ದೇನೆ. ನನಗೆ ನಾನು ಯಾರು ಎಂದೆ ತಿಳಿಯುತ್ತಿಲ್ಲ. ಚೆನ್ನಮಲ್ಲಿಕಾರ್ಜುನನ ಕಾಣದೆ ಆನಾರೆಂದರಿಯೆ ಕೇಳಾ ತಾಯಿ. ಎನ್ನುವುದು ಹೊಸ ಮಾತು. ಎಲ್ಲರಿಗೆ ನಾನು ನಾನು ಎನ್ನುವುದು ಪ್ರಧಾನವಾಗಿ ಕಾಡುತ್ತದೆ . ಈ ನಾನು

ಎನ್ನುವುದರಿಂದಲೆ ಜಗತ್ತಿನ ಎಲ್ಲ ಜೀವ ಜಾಲ ತನಗೆ ಅಂತ್ಯ ತಂದುಕೊಳ್ಳುತ್ತಿದೆ. ಆದರೆ ಅನುಭಾವ ಜೀವನದಲ್ಲಿ ಮಾತ್ರ ನಾನತ್ವ ಅಳಿದುಕೊಳ್ಳುವ ಪ್ರಕ್ರಿಯೆ ಕಾಣುತ್ತೇವೆ.

ಕರಸ್ಥಲ ದಲ್ಲಿ ಇಷ್ಟಲಿಂಗವಿದೆ. ಆದರೆ ನಾನು ಯಾರು ಎಂಬುದೆ ಮರೆತು ಹೋಗಿದೆ. ಇಲ್ಲಿ .ಅಕ್ಕನವರಿಗೆ ಕೂಡಲೆ ಪರಮಾತ್ಮನನ್ನು ಕಾಣಬೇಕಾಗಿದೆ.

18)ಹೋದನೂರಿಗೆ ಇದ್ದೆ ನಾನಲ್ಲಿ. ಹೋದರೆ ಮರಳಿತ್ತ ಬಾರೆನವ್ವ.
ಐವರು ಭಾವದಿರು ಐವರು ನಗೆವೆಣ್ಣು.. ಐವರೈವರು ಕೂಡಿ ಎನ್ನ
ಕಾಡುವರು . ಬೈವರು ಹೊಯ್ವರು .ಮಿಗೆ ಕೇಡ ನುಡಿವರು.
ಇವರೈವರ ಕಾಟಕ್ಕೆ ನಾನಿನ್ನಾರೆ ಕಾಣವ್ವ.
ಅತ್ತೆಮಾವ, ಮೈದುನ ನಗೆವೆಣ್ಣು
ಚಿತ್ತವನೊರೆದು ನೋಡುವ ಗಂಡ.
ಕತ್ತಲೆಯಾದರೆ ಕರೆದನ್ನವನೀಡಿ
ಅತ್ತಿಗೆ ಹತ್ತೆಂಟು ಬೈವಳಮ್ಮ ಉಪಮಾತೀತರು ರುದ್ರಗಣಂಗಳು
ಅವರೆನ್ನ ಬಂಧುಬಳಗಂಗಳು ಶ್ರೀಶೈಲಚೆನ್ನಮಲ್ಲಿಕಾರ್ಜುನ
ಒಲಿದಡೆ ಮರಳಿ ಬಾರೆನವ್ವ ತಾಯಿ.

ಪದಗಳ ಅರ್ಥ

ಊರು-ಗಂಡನಮನೆ, ಮುಕ್ತಿಧಾಮ. ಐವರುಭಾವದಿರು-ಪಂಚಜ್ಞಾನೇಂದ್ರಿಯ,
ಐವರು ನಗೆವೆಣ್ಣು-ಪಂಚ ವಿಷಯಗಳು,
ಬೈವರು, ಹೊಯ್ವರು-ವಿಷಯಗಳ ಕಡೆಗೆ ಎಳೆವರು. ಕೇಡು-ವಿಷಯಮುಖವಾಗಿಬಾ ಎಂದು ಜಗ್ಗುವರು.
ಆರೆ-ಸಹಿಸಲಸಾಧ್ಯ.
ಗಂಡ-ಪರಮಾತ್ಮಚೆನ್ನಮಲ್ಲಿಕಾರ್ಜುನ.
ಕತ್ತಲೆ-ಅಜ್ಞಾನ.

ರುದ್ರಗಣ-ಶರಣರು.ಶ್ರೀಶೈ ಲಚೆನ್ನಮಲ್ಲಿಕಾರ್ಜುನ ಮೊದಲಿಗೆ ಶಿವ.ಶ್ರೀಶೈಲದ ಮಲ್ಲಿಕಾರ್ಜುನ ಶಿವಾಲಯದ ಶಿವಲಿಂಗವೆ ಅವನು.

ಇಲ್ಲಿ ಪ್ರತ್ಯಕ್ಷನಾಗಿ ಮನುಷ್ಯರೂಪದಲ್ಲಿ ಬರುತ್ತಾನೆಂದು ತಿಳಿದಿದ್ದರು. ನಂತರ  ಶ್ರೀ ಶೈಲದ ಗುಹೆಯಲ್ಲಿ ಹತ್ತು ವರ್ಷ ತಪಸ್ಸು ಮಾಡಿ ಸಾಕ್ಷಾತ್ಕಾರ ಮಾಡಿಕೊಂಡ ಮೇಲೆ ಚೆನ್ನಮಲ್ಲಿಕಾರ್ಜುನ ಎಂದರೆ ಅದು ಅತೀತವಾದ ಒಂದು ಸಾತ್ವಿಕ ಶಕ್ತಿ ಎಂದು ಸಾಧಿಸಿ ತಿಳಿದರು. ಅದರ ಜೊತೆಗೆ ಮನುಷ್ಯರಂತೆ ಸಂಸಾರ ಮಾಡಲು ಬರದು ಎಂದು ಜ್ಞಾನೋದಯವಾಯಿತು. ತಿಳಿವಾಯಿತು.

ಹೋದೆನೂರಿಗೆ ಇದ್ದೆನಾನಿಲ್ಲಿ ಹೋದರೆ ಮರಳಿ ಬಾರೆನವ್ವ. ನಾನು ನನ್ನ ಗಂಡನ ಮನೆಗೆ ಹೋಗುವೆನು. ಅತ್ತ ಹೋದರೆ ಮತ್ತೆ ಈ ಕಡೆಗೆ ಬರುವುದಿಲ್ಲ. ಐವರು ಭಾವದಿರು ಐವರು ನಗೆವೆಣ್ಣು ಐವರು ಕೂಡಿ ಎನ್ನ ಕಾಡುವರು. ನನಗೆ ಐವರು ಭಾವಂದಿರು ಇದ್ದಾರೆ. ಐವರು ನಾದಿನಿಯರಿದ್ದಾರೆ. ಇವರೆಲ್ಲ ಸೇರಿ ನನಗೆ ತೊಂದರೆ ಕೊಡುತ್ತಿದ್ದಾರೆ. ಬೈವರು ಹೊಯ್ಕರು ಮಿಗೆ ಕೇಡ ನುಡಿವರು. ಇವರೆ ವರ ಕಾಟಕ್ಕೆ ನಾನಿನ್ನಾರೆನವ್ವ, ಬೈತರೆ,ಹೊಡಿತರೆ, ಕೆಟ್ಟದ್ದನ್ನು ಬಯಸುತ್ತಾರೆ. ಇವರ ತೊಂದರೆಗಳನ್ನು ನಾನು ಸಹಿಸಲಾರೆ. ವಿಷಯಾದಿ ಇಂದ್ರಿಯಗಳು ಧ್ಯಾನ,ಅನು ಭಾವ ಜೀವನಕ್ಕೆ ಸಹಕರಿಸುತ್ತಿಲ್ಲ. ಎಂದರ್ಥ. ಅತ್ತೆ ಮಾವ, ಮೈದುನ, ನಗೆವೆಣ್ಣು ,ಚಿತ್ತವನೊರೆದು ನೋಡುವ ಗಂಡ, ಕತ್ತಲೆ ಯಾದರೆ ಕರೆದನ್ನವ ನೀಡಿ ಅತ್ತಿಗೆ ಹತ್ತೆಂಟು ಬೈವಳಮ್ಮ. ಅತ್ತೆಮಾವ, ಮೈದುನ,
ನಗೆವೆಣ್ಣು ಎಂದರೆ ನಾಲ್ಕು ಅಂತಃಕರಣಗಳು. ಮನ,ಚಿತ್ತ ಬುದ್ಧಿ, ಅಹಂಕಾರ. ಇವು ಕೂಡ ನನಗೆ ಸಹಕರಿಸುತ್ತಿಲ್ಲ. ಸಾಲದ್ದಕ್ಕೆ ಪರಮಾತ್ಮನು ನೀನು ನಿರ್ಮಲ ಮನಸ್ಸು ಪಡೆದಿಲ್ಲ. ಒಂದೆ ಚಿತ್ತದಿಂದ ನನ್ನನ್ನು ಧ್ಯಾನಿ ಸುತ್ತಿಲ್ಲ. ಹೀಗೆ ಸಾಕ್ಷಾತ್ಕಾರವಾಗಲು ಏನೇನೊ ಕಾರಣ ಹೇಳಿ ದಿನ ದೂಡುತ್ತಿ ದ್ದಾನೆ. ರಾತ್ರಿ ಎಂದರೆ ಕತ್ತಲೆ ಅಧಿಕವಾಗುತ್ತಿದ್ದಂತೆ ನಿದ್ರಾದೇವಿ ಬಂದು ಒಕ್ಕರಿಸಿ ನನ್ನನ್ನು ಧ್ಯಾನ ಮಾಡದ ಹಾಗೆ ಯಾಮಾರಿಸಿ ಬಿಡುತತ್ತಾಳೆ. ಉಪಮಾತೀತರು ರುದ್ರಗಣಂಗಳು. ಅವರನ್ನ ಬಂಧು ಬಳಗಂಗಳು. ಹೋಲಿಸಲು ಇನ್ನೊಂದು ಹೋಲಿಕೆಯಿ ಲ್ಲದವರು  ತಪಸ್ವಿ. ಯೋಗಿಗಳು ,ಸಿದ್ದರು ,ಅವರೆ ನನ್ನ ನಿಜವಾದ ಬಂಧು, ಬಳಗ, ನೆಂಟರಿಷ್ಟರು.ಶ್ರೀಶೈಲ ಚೆನ್ನಮಲ್ಲಿಕಾರ್ಜುನ ಒಲಿದಡೆ ಮರಳಿತ್ತ ಬಾರೆನವ್ವ ತಾಯಿ. ಪರಮಾತ್ಮನು ನನಗೆ ಸಾಕ್ಷಾತ್ಕಾರವಾದರೆ ಮತ್ತೆ ನಾನು ಈಭವಕ್ಕೆ ಬರುವುದಿಲ್ಲ.

ಲೋಕದ ಜೀವನದಲ್ಲಿ ಮನೆಗೆ ಬಂದ ಸೊಸೆಗೆ ಮನೆಯವರೆಲ್ಲ ಸೇರಿ ಕಿರುಕುಳ ಕೊಡುವ ಸಂಗತಿಗಳು ಅಲ್ಲಲ್ಲಿ ಕೇಳಿಬರುತ್ತಿವೆ. ಹೆಣ್ಣು ಸೊಸೆಯಾಗಿ ಹೋದ ಕೆಲವು ಮನೆಗಳಲ್ಲಿ ಕಿರುಕುಳ

ಅನುಭವಿಸುತ್ತಿರುವುದನ್ನು ಅಕ್ಕ ಆಗಲೂ ಗಮನಿಸಿದ್ದರು. ಅಂತಹ ಹೆಣ್ಣಿನ ತವಕ, ತಲ್ಲಣಗಳನ್ನು ಅನುಭಾವ ಸಾಧನೆಗೆ ರೂಪಕ ಮಾಡಿ ಚಿತ್ರಿಸಿದ್ದಾರೆ. ಇಂತಹ ಕಿರುಕುಳಗಳು ಮನುಷ್ಯನ ಜೀವನದಲ್ಲಿ ಹಾಗೆಯೆ ಮುಂದುವರಿಯುತ್ತದೆ. ಇದಕ್ಕೆ ಪ್ರಧಾನವಾಗಿ ಅಜ್ಞಾನವೆ ಕಾರಣವಾಗಿರುತ್ತದೆ. ಅಜ್ಞಾನ ಹೋದರೆ ಕಿರುಕುಳ ಹೋಗುತ್ತದೆ. ಇಲ್ಲಿ ಅಕ್ಕನವರು ಲಗ್ನವಾಗಿ ಹೋಗು ತಿರುವುದು ಪರಮಾತ್ಮ ಚೆನ್ನಮಲ್ಲಿಕಾರ್ಜುನನ ಮನೆಗೆ. ಪ್ರಾಪಂಚಿಕರ ಮನೆಗಲ್ಲ. ಶಿವನಿಗೆ ತಂದೆ, ತಾಯಿ, ಬಂಧು, ಬಳಗ ಯಾರೂ ಇಲ್ಲ. ಅವನು ಬೋಳಾಶಂಕರ. ಅವನಿಗಿರುವುದು ಭಕ್ತರು ಮಾತ್ರ. ಇಂತಹ ಪರಮಾತ್ಮನ ಮನೆಯಲ್ಲಿ ಕಿರುಕುಳ ಆದದ್ದು ಗಂಡನ ಮನೆಯವರಿಂದಲ್ಲ. ಪಂಚೇಂದ್ರಿಯ, ಪಂಚವಿಷಯ, ಪಂಚ ತನ್ಮಾ ತ್ರಗಳಿಂದ ರಾಗಾದಿಭಾವ ಮತ್ತು ತ್ರಿಗುಣಗಳಿಂದ.ಒಂದರ್ಥದಲ್ಲಿ ಇವು ಪರಮಾತ್ಮನ ತವರು ಮನೆಯವರೆ. ಯಾಕೆಂದರೆ ಇವು ಅವನ ಸೃಷ್ಟಿ. ದೇಹ, ಇಂದ್ರಿಯ, ರಾಗಾದಿ ಭಾವಗಳು ವಿಕಾರಗಳು ಬಹುವಾಗಿ ಕಾಡುತ್ತವೆ. ಅರಿವು ಶುದ್ಧಮನಸ್ಸು ಭಕ್ತಿಜ್ಞಾನಕ್ಕೆ ತವಕಿಸಿದರೆ, ಅಶುದ್ಧ ಮನಸ್ಸು ವಿಷಯಾದಿ,ಅಜ್ಞಾನಕ್ಕೆ ಎಳೆಯುತ್ತದೆ. ಪರಮಾತ್ಮನು ಶುದ್ಧಮನಸ್ಸಿಲ್ಲದೆ ಒಲಿಯುವುದಿಲ್ಲ. ಅಶುದ್ಧ ಮನಸ್ಸು ಕಾಟ ಕೊಡುವುದು ತಪ್ಪುವುದಿಲ್ಲ. ಸಾಧನೆ ಮಾಡುತ್ತ ಈ ವಿಕಾರಗಳನ್ನೆಲ್ಲ ದಾಟಿದರೆ ಪರಮಾ ತ್ಮನ ಮನೆ ಸೇರಿದಂತೆಯೆ. ಅಂದಾಗ ಮುಕ್ತಿ. ಸಾಧಕನು ಪರಮಾತ್ಮನನ್ನು ಪಡೆದು ಕೊಳ್ಳಬೇಕೆಂದರೂ ಅಡ್ಡಿಗಳು. ಅಡ್ಡಿ ಆತಂಕಗಳು ಎಲ್ಲ ಕಡೆ ಇವೆ. ಆನಂದ ಎನ್ನು ವುದು ಕೂಡ ಸುಮ್ಮನೆ ಸಿಗದು. ಸಾಧನೆ ಬೇಕು.

19) ಹೆಣ್ಣು ಹೆಣ್ಣಾದರೆ ಗಂಡಿನ ಸೂತಕ.
ಗಂಡು ಗಂಡಾದರೆ ಹೆಣ್ಣಿನ ಸೂತಕ .
ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ?
ಅಯ್ಯಾ ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ.
ಎನ್ನ ದೇವ ಚೆನ್ನಮಲ್ಲಿಕಾರ್ಜುನ ನೆಂಬ
ಗರುವಂಗೆ ಜಗವೆಲ್ಲ ಹೆಣ್ಣು ನೋಡಾ.

ಪದಗಳ ಅರ್ಥ

ಸೂತಕ-ಮೈಲಿಗೆ ಮಾಯೆ.
ಹಿಂಗು-ನಾಶ,
ತೆರಹು-ಅವಕಾಶ,
ಮರುಳು-ಹುಚ್ಚು
ಗರುವ- ಶ್ರೇಷ್ಠವೀರ,

## ವಚನದ ಅರ್ಥ

ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ, ಗಂಡು ಗಂಡಾದಡೆ ಹೆಣ್ಣಿನ ಸೂತಕ. ಲೋಕದಲ್ಲಿ ಹೆಣ್ಣು ದೇಹ ಕಾರಣವಾಗಿ ಗಂಡಿನ ಮಾಯೆಗೆ ಒಳಗಾಗುತ್ತಾಳೆ ಹಾಗೆ ಗಂಡು ಹೆಣ್ಣಿನ ಮಾಯೆಗೆ ಒಳಗಾಗುತ್ತಾನೆ. ಈಮಾಯಾಮೈಲಿಗೆ ಇಬ್ಬರನ್ನೂ ಹಿಡಿಯುತ್ತದೆ. ಹೆಣ್ಣಿಗೆ ಗಂಡಿನ ಹಂಗು, ಗಂಡಿಗೆ ಹೆಣ್ಣಿನ ಹಂಗು ತಪ್ಪಿದ್ದಲ್ಲ. ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ? ಈ ಮಾಯಾ ಮಲಿನ ಮನದಲ್ಲಿ ಸ್ಥಾಯಿಯಾಗಿ ಇದೆ.ನಾವು ಮೊದಲು ಈಮನದ ಮಾಯೆಯನ್ನು ಕಳೆದುಕೊಳ್ಳಬೇಕು. ಆಗ ಮಾತ್ರ ಈ ಮಾಯಾಮಲಿನ ನಮ್ಮನ್ನು ತಟ್ಟುವುದಿಲ್ಲ. ಅಯ್ಯಾ ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ. ತಿಳಿದು ನೋಡಿದರೆ ಮಾಯಾ ಮಲಿನ ಮೊದಲು ಇರಲಿಲ್ಲ. ಈ ಮಾಯೆ ಮೊದಲು ನಮ್ಮಲ್ಲಿಯೆ ಏನೂ ಅಲ್ಲದೆ ಇತ್ತು. ಆದರೆ ಅದು ಆಕಾರ ಪಡೆದು ಪ್ರಕಟವಾದ ಮೇಲೆ ಈ ಸೂತ ಕಕ್ಕೆ ಜಗತ್ತೆ ಹುಚ್ಚಾಗಿದೆ. ತಿಳಿದು ನೋಡಿದರೆ ಇವು ಎರಡು ಮೊದಲು ಒಟ್ಟಿಗೆ ಇದ್ದವು. ಆಗ ಇಲ್ಲದ ಮಾಯೆ ಈಗ ಉಭಯರನ್ನು ಬಲವಾಗಿ ಹಿಡಿದಿದೆ. ಎನ್ನ ದೇವ ಚೆನ್ನಮಲ್ಲಿಕಾರ್ಜುನನೆಂಬ ಗರುವಂಗೆ ಜಗವೆಲ್ಲ ಹೆಣ್ಣು ನೋಡಾ. ತಿಳಿದು ನೋಡಿದರೆ ಚೆನ್ನಮಲ್ಲಿಕಾರ್ಜುನನೆ ಧೀರ. ಅವನೊಬ್ಬನೆ ಗಂಡು ಉಳಿದವರೆಲ್ಲ ಅವನಿಗೆ ಹೆಣ್ಣು ಶಕ್ತಿ ಸ್ವರೂಪರೆ . ಅಕ್ಕನವರು ಹೆಣ್ಣು ಗಂಡು ಈ ಉಭಯ ಹೇಗೆ ತಮಗೆ. ತಾವೆ ಸೂತಕವಾಗಿ ನಾಶದ ಹಾದಿ ಹಿಡಿದಿವೆ ಎಂಬುದನ್ನು ಈ ವಚನದಲ್ಲಿ ವಿವರಿಸಿದ್ದಾರೆ. ಈ ವಿಚಾರ ಹೊಸತು. ಎಲ್ಲರೂ ಹೆಣ್ಣು ಮಾಯೆ ಎಂದು ಹೇಳಿಕೊಂಡು ಬರುತ್ತಿದ್ದರು. ಉಭಯತ್ರರು ಪರಸ್ಪರ ಮಾಯೆ ಎಂಬುದು ಹೊಸ ವಿಚಾರ.

20) ಹುಟ್ಟು ಹೊರೆಯ ಕಟ್ಟಳೆಯ ಕಳೆದೆನವ್ವಾ. ಹೊನ್ನು ಮಣ್ಣಿನ ಮಾಯೆಯ ಮಾಣಿಸಿದನವ್ವಾ. ಎನ್ನ ತನುವಿನ ಲಜ್ಜೆಯನಿಳುಹಿ ಎನ್ನ ಮನದ ಕತ್ತಲೆಯ ಕಳೆದ
ಚೆನ್ನಮಲ್ಲಿಕಾರ್ಜುನಯ್ಯನೊಳಗಾದವಳ
ಏನೆಂದು ನುಡಿಸುವಿರಿ ಅವ್ವಾ .

## ಪದಗಳ ಅರ್ಥ

ಹುಟ್ಟು ಹೊರೆ-ಜನನದ ಭಾರ
ಕಟ್ಟಳೆ-ವಿಧಿ, ಕರ್ಮ,ಅಂದರೆ ಇಲ್ಲಿ ದೇಹಕಾರಣ ವಾಗಿ ಬಂದಿರುವ ದೇಹದ ಗುಣಧರ್ಮಗಳು. ಉದಾ: ಅಜ್ಞಾನ, ಮೂಢನಂಬಿಕೆ ಇತ್ಯಾದಿ ಅನೇಕ ಸಂಗತಿಗಳ ಬಗೆಗೆ ಮಾಹಿತಿ. ಪರಿಚಯ. ನೇಮ
ಮಾಯೆ-ದುಃಖ,
ಮಾಣಿಸು-ಬಿಡಿಸು
ಇಳುಹು -ಇಳಿಸಿ.
ತನುವಿನ ಲಜ್ಜೆ-ಭಾವವಿಕಾರ .

## ವಚನದ ಅರ್ಥ

ಹುಟ್ಟು ಹೊರೆಯ ಕಟ್ಟಳೆಯ ಕಳೆದೆನವ್ವಾ. ಜನನವಿಡಿದುಬಂದ ಕರ್ಮಗಳನ್ನು ಕಳೆದು ಕೊಂಡೆ. ಹೊನ್ನು ಮಣ್ಣಿನ ಮಾಯೆಯ ಮಾಣಿಸಿದೆನವ್ವಾ.ಬಂಗಾರ, ಭೂಮಿಯ ಆಶೆಯನ್ನು ಕಳೆದುಕೊಂಡೆ. ಅಂದರೆ ನಾನು ನನ್ನದು ಎನ್ನುವ ಮೋಹವನ್ನು ಕಳೆದು ಕೊಂಡೆ. ಎನ್ನ ತನುವಿನ ಲಜ್ಜೆಯನಿಳುಹಿ ಎನ್ನ ಮನದ ಕತ್ತಲೆಯ ಕಳೆದೆನವ್ವಾ. ನಾನು ಹೆಣ್ಣು, ನಾನು ಅಬಲೆ, ನಾನು ಕೊಡಗೂಸು ಎಂಬಿತ್ಯಾದಿ ಭಾವಗಳು ಸಂಬಂಧಗಳನ್ನು ನಷ್ಟಮಾಡಿಕೊಂಡೆ. ಹೆಣ್ಣುತನದ ಲಜ್ಜೆಗಳನ್ನು ಕಳೆದೆನು. ನನ್ನ ಮನಸ್ಸಿನಲ್ಲಿ ದೇಹವಿಡಿದು ಬಂದ ಕತ್ತಲೆಯಿತ್ತು ಅದನ್ನು ಕಳೆದೆ. ಚೆನ್ನಮಲ್ಲಿಕಾರ್ಜುನಯ್ಯನೊಳಗಾದವಳ ಏನೆಂದು ನುಡಿಸುವಿರಿ ಅವ್ವ. ನಾನು ಚೆನ್ನಮಲ್ಲಿಕಾರ್ಜುನಯ್ಯನವಳು ನನ್ನನ್ನು ಏನೆಂದು ಮಾತನಾಡಿಸಿಸುವಿರಿ?ಲೌಕಿಕ ವಿಚಾರಗಳಿಂದ ನನ್ನನ್ನು ಮಾತ ನಾಡಿಸಬೇಡಿರಿ ಎನ್ನುವುದು ಈವಚನದ ಭಾವ.

ಅಕ್ಕಮಹಾದೇವಿಯವರದು ಆ ಕಾಲಕ್ಕೂ ಆಶ್ಚರ್ಯಕರವಾದ ಜೀವನ . ಪರಮಾತ್ಮನನ್ನೆ ಗಂಡನನ್ನಾಗಿ ಪಡೆಯುವೆನೆಂದು

ಸರ್ವಸ್ವವನ್ನು ತ್ಯಾಗಮಾಡಿದ ಅವರ ಬದುಕು ಎಲ್ಲರಿಗೂ ಅವರ ಬಗೆಗೆ ಗೌರವ ಮತ್ತು ಮರುಕ ಹುಟ್ಟಿಸಿದವು . ಅಕ್ಕ ಮಹಾದೇವಿಯವರನ್ನು ನೋಡಿದವರಿಗೆಲ್ಲ ಅಯ್ಯೋ ಎಂತಹ ಘಾತವಾಯಿತು. ಲಗ್ನ ಮಾಡಿಕೊಂಡು ಸುಖವಾಗಿರಬಹುದಿತ್ತಲ್ಲ. ಮಹಾರಾಜನೆ ಪಟ್ಟದ ರಾಣಿಯ ನ್ನಾಗಿ ಮಾಡಿಕೊಳ್ಳುತ್ತೇನೆಂದರೂ ಒಲ್ಲದೆ ನಿರಾಕರಿಸಿದರಲ್ಲ. ಎಂತಹ ತ್ಯಾಗ ಇದೇನು ಹುಚ್ಚು'. ಹುಟ್ಟ ಬಟ್ಟೆಯೂ ಬೇಡ ಎಂದರೆ ಹೇಗೆ? ಚಳಿ,ಮಳೆ,ಗಾಳಿ ಬಿಸಿಲು.ಆರೋಗ್ಯ ಏನಾಗಬೇಕು. ಸಾಲದ್ದಕ್ಕೆ ಅಪೂರ್ವ ಚೆಲುವು ಬೇರೆ? ತುಂಬು ತಾರುಣ್ಯ ಬೇರೆ. ಇದೆಲ್ಲ ಮನೆತನಸ್ತರಿಗೆ ಹೇಳಿಸಿದ್ದಲ್ಲ. ಬಾ ತಾಯಿ ನೀ ಸುಮ್ಮನೆ ನಮ್ಮ ಮನೆಯಲ್ಲಿದ್ದು ಬಿಡು. ಅದೇನು ಸಾಧನೆ ಮಾಡುತ್ತೀಯೊ ಮಾಡು. ಬೇಕಾದ ವ್ಯವಸ್ಥೆ ನಾವು ಮಾಡುತ್ತೇವೆ ಎಂದು ಎಷ್ಟೋ ಹಿರಿಯರು ಮುಂದೆ. ಬಂದಿದ್ದಾರೆ. ಅಕ್ಕನವರಿಗೆ ಅನೇಕ ಹಿರಿಯ ಮಹಾತ್ಮರಾದ ಶರಣರ ಆಸರೆ, ಶ್ರೀಶೈಲದಲ್ಲಿ ಸಿಕ್ಕಿರುವುದರಿಂದ ಅವರ ಸಾಧನೆ. ಅಕ್ಕನವರು ಉಡುತಡಿಯಿಂದ ಶ್ರೀ ಶೈಲದ ಕದಳಿಯವನದ ಗುಹೆಯವರೆಗೆ
ಎಲ್ಲಿ ಎಲ್ಲಿ ತಂಗಿದ್ದರೊ, ಅಲ್ಲಲ್ಲಿ (ಊರುಗಳಲ್ಲಿ)
ಆಶ್ರಮಗಳಲ್ಲಿ, ಅಲ್ಲಲ್ಲಿ ಕುಟೀರಗಳು ಈಗಲೂ ಇವೆ.

ಅಕ್ಕಮಹಾದೇವಿಯವರು, ಧರ್ಮಗುರುಗಳಾಗಿ ಧರ್ಮಭೋಧನೆ ನೀಡುತ್ತಿದ್ದಾರೆ. ಆಕಾಲದಲ್ಲಿ ಜೈನಧರ್ಮದ ಸನ್ಯಾಸಿನಿಯರು, ಬೌದ್ಧ? ಧರ್ಮದ ಸನ್ಯಾಸಿನಿಯರು ಧರ್ಮ ಪ್ರಸಾರದಲ್ಲಿ ಅಲ್ಲಲ್ಲಿ ಕಂಡುಬಂದಿದ್ದಾರೆ. ಅಕ್ಕನವರು ಕೂಡ ಧರ್ಮಗು ರುಗಳಾಗಿ ತಮ್ಮನ್ನು ಧರ್ಮ ಪ್ರಸಾರದಲ್ಲಿ ತೊಡಗಿಸಿಕೊಂಡಿದ್ದಾರೆ.

21) ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ.
ಬೆಳೆದೆನಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು ಸುಜ್ಞಾನೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ.
ಇಂತಪ್ಪ ತ್ರಿವಿಧಾಮೃತ ದಣಿಯಲೆರೆದು ಸಲಹಿದಿರೆನ್ನ.
ವಿವಾಹವ ಮಾಡಿದಿರಿ, ಸಯವಪ್ಪ ಗಂಡಂಗೆ ಕೊಟ್ಟಿರಿ
. ಕೊಟ್ಟ ಮನೆಗೆ ಕಳುಹಲೆಂದು
ಅಸಂಖ್ಯಾತರು ನೆರೆದು ಬಂದಿರಿ.
ಶರಣರು ಮೆಚ್ಚಲು ಒಗತನವ ನಾ ಮಾಡುವೆ.
ಚೆನ್ನಮಲ್ಲಿಕಾರ್ಜುನನ ಕೈಯ ಹಿಡಿದು. ನಿಮ್ಮ ಮಂಡೆಗೆ ಹೂವ

ತಹೆನಲ್ಲದೆ ಹುಲ್ಲ ತಾರೆನು. ಅವಧರಿಸಿ ನಿಮ್ಮಯ ಅಡಿಗಳೆಲ್ಲರು ಶರಣು ಶರಣಾರ್ಥಿ.

## ಪದಗಳ ಅರ್ಥ

**ಅಸಂಖ್ಯಾತರು-ಶರಣರು, ಪರಮಾರ್ಥ-ಅನುಭಾವ.**
**ಮಂಡ-ತಲೆ.**
**ಅವಧರಿಸಿ-ಕೇಳಿ**

## ವಚನದ ಅರ್ಥ

**ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ. ಬೆಳೆದೆನಸಂಖ್ಯಾತರ ಕರುಣದೊಳಗೆ. ನಾನು ಶ್ರೀಗುರುವಿನ ಕರದಲ್ಲಿ ಹುಟ್ಟಿದೆ. ಶರಣರ ಕರುಣದಲ್ಲಿ ಬೆಳೆದೆ. ಭಾವವೆಂಬ ಹಾಲು ಸುಜ್ಞಾನವೆಂಬ ತುಪ್ಪ ಪರಮಾರ್ಥ ವೆಂಬ ಸಕ್ಕರೆಯನಿಕ್ಕಿದರುನೋಡಾ. ಈ ಶರಣರುನನಗೆ ಸದ್ಭಾವವೆಂಬ ಹಾಲು ಸುಜ್ಞಾನದತುಪ್ಪ**
**ಪರಮಾರ್ಥ ಎನ್ನುವ ಸಕ್ಕರೆಯನ್ನು ಇಕ್ಕಿದರು.ನೋಡ ಇಂತಪ್ಪ ತ್ರಿವಿಧಾಮೃತ ದಣಿಯಲೆರೆದು ಸಲಹಿದಿರೆನ್ನ. ಹಾಲು, ತುಪ್ಪಸಕ್ಕರೆಯನ್ನು ತಣಿಯುವಷ್ಟು ನೀಡಿ ಕಾಪಾಡಿದಿರಿ. ಕೊಟ್ಟಿರಿ . ಅನುರೂಪನಾದ ವರನನ್ನು ನೋಡಿ ನನ್ನನ್ನು . ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರು ನೆರೆದು**
**ಬಂದಿರಿ. ಕೊಟ್ಟ ಮನೆಗೆ ಕಳುಹಿಸಿ ಕೊಡುವುದಕ್ಕಾಗಿ ನೀವು ಎಲ್ಲ ಶರಣರು ಕೂಡಿ ಬಂದಿರಿ.ಶರಣರು ಮೆಚ್ಚಲು ಒಗತನವ ನಾ ಮಾಡುವೆ. ಚೆನ್ನಮಲ್ಲಿಕಾರ್ಜುನನ ಕೈಯ ಹಿಡಿದು. ಶರಣರುಮೆಚ್ಚುವಂತೆ ಚೆನ್ನಮಲ್ಲಿಕಾರ್ಜುನನೊಂದಿಗೆ ಅನುಭಾವ ಜೀವನ ನಡೆಸುತ್ತೇನೆ.ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು. ನಿಮ್ಮ ಕೀರ್ತಿಗೆ ಹೂ ತರುತ್ತೇನೆ ಹುಲ್ಲು ತರುವುದಿಲ್ಲ. ಅವಧರಿಸಿ ನಿಮ್ಮಯ ಅಡಿಗಳೆಲ್ಲರು ಶರಣು ಶರಣಾರ್ಥಿ. ನಿಮ್ಮ ಪಾದ ದಯವಿಟ್ಟುಕೇಳಿರಿ.ನಿಮಗೆಲ್ಲರಿಗೆ ಶರಣು ಶರಣಾರ್ಥಿ.**

**ಅಮೋಘವಾದ ಹೃದಯಸ್ಪರ್ಶಿ ಸನ್ನಿವೇಶ.**
**ಅಕ್ಕಮಹಾದೇವಿಯವರು ಕಲ್ಯಾಣದಲ್ಲಿ ಎಲ್ಲ ಶರಣಶರಣೆಯರಿಗೆ ತಮ್ಮ ಸುಂದರ ವಚನಗಳು, ಸನ್ನಡತೆ, ವೈರಾಗ್ಯ, ಅಮೋಘವಾದ ಜ್ಞಾನ,ಸದ್ಭಕ್ತಿ ಸಾಧನೆಗಳಿಂದ ಪ್ರಥಮರಾದ**
**ಅಕ್ಕಮಹಾದೇವಿಯವರು ಕಲ್ಯಾಣ ಕಂಡರಿಯದ ಅಪೂರ್ವ ಪ್ರತಿಭೆ.**

ಪ್ರಭು ದೇವರನ್ನು ಮೀರಿಸಿದ ವೈರಾಗ್ಯ,ಜ್ಞಾನ,ಸಾಧೆಯಿಂದ ಪುರುಷ ಮಹಿಳೆಯರ ನಡುವೆ ಮಿಗಿಲಾದ ವಿಶ್ವಗುರುವೆನಿಸಿದ ಅಕ್ಕಮಹಾದೇವಿಯವರು .   ಶ್ರೀಶೈಲದ ಕಡೆಗೆ ನಡೆದರು. ಅವರ ಜೊತೆ ಅಸಂಖ್ಯಾತ ಶರಣರ ತಂಡವೂ ಅನುಭಾವ ಜೀವನ ನಡೆಸಲು ಅವರ ಜೊತೆ ನಡೆಯಿತು. ಅಕ್ಕನಿಲ್ಲದ ಕಲ್ಯಾಣ ಬಣಬಣ ಎನಿಸಿತು. ತವರಿನಿಂದ ಪತಿಯ ಮನೆಗೆ ಹೊರಟ ಮಗಳನ್ನು ಕಳುಹಿಸಿಕೊಡುವಂತೆ ಶರಣರು ಅಕ್ಕಮಹಾದೇವಿಯವರನ್ನು ಶ್ರೀಶೈಲದ ಕದಳೀವನಕ್ಕೆ ಬೀಳ್ಕೊಟ್ಟರು.

22)ಹೊಳೆವ ಕೆಂಜೆಡೆಗಳ ಮಣಿಮಕುಟದ ಒಪ್ಪುವ ಸುಲಿಪಲ್ಗಳ ನಗೆಮೊಗದ ಕಂಗಳ ಕಾಂತಿಯ ಈರೇಳುಭುವನದ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು. ಕಂಡನ್ನ ಕಂಗಳ ಬರ ಹಿಂಗಿತ್ತೆನಗೆ . ಗಂಡ ಗಂಡರನೆಲ್ಲ ಹೆಂಡಿರಾಗಿ ಆಳುವ ಗರುವನ ಕಂಡೆ. ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ ಪರಮಗುರು ಚೆನ್ನಮಲ್ಲಿಕಾರ್ಜುನನ ಕಂಡು ಬದುಕಿದೆನು.

ಪದಗಳ ಅರ್ಥ

ಗರುವ-ಶ್ರೇಷ್ಠ, ದೊಡ್ಡವ,
ಪರಮಗುರು- ಪರಮಾತ್ಮ.
ಈರೇಳು-ಹದಿನಾಲ್ಕು

ಹೊಳೆವ ಕೆಂಜೆಡೆಗಳ ಮಣಿಮಕುಟದ ಒಪ್ಪುವ ಸುಲಿಪಲ್ಗಳ ನಗೆಮೊ ಗದ ಕಂಗಳ ಕಾಂತಿಯ ಹೊಳೆಯುವ ಕೆಂಜೆಡೆಗಳು. ಧರಿಸಿದ ರುದ್ರಾಕ್ಷಿಯ ಕಿರೀಟ. ಆ ಮುಖಕ್ಕೆ ಒಪ್ಪುವ ಎಳೆಯ ಹೊಳೆವ, ನಗೆಯ ದಂತ ಪಂಕ್ತಿಗಳು. ನಗುವ ಮುಖ ಬೆಳದಿಂಗಳ ನಗೆ ಕಣ್ಣುಗಳ ಕೋರೈಸುವ ಕಾಂತಿ, ಈರೇಳುಭುವನವ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು. ಕಂಡೆನ್ನ ಕಂಗಳ ಬರ ಹಿಂಗಿತ್ತೆನಗೆ. ಹದಿನಾಲ್ಕು ಲೋಕವನ್ನೆ ಪ್ರಕಾಶಿಸುವ ಪರಮಾತ್ಮನನ್ನು ಕಂಡೆ ಕಂಡು ನನ್ನ ಕಣ್ಣಿನ ಬರ ಹಿಂಗಿತು. ತೃಪ್ತಿ ಯಾಗುವಷ್ಟು ದರ್ಶನ ಪಡೆದೆ. ಆ ರೂಪದ ದರ್ಶನ ಹಲವುಕಾಲದ ಹಸಿವನ್ನೆಲ್ಲ ಹಿಂಗಿಸಿತು. ಗಂಡಗಂಡರನೆಲ್ಲ ಹೆಂಡಿರಾಗಿ ಆಳುವ ಗರುವನ ಕಂಡೆ. ಯಾರು ಧೀರರು ವೀರರು

ಎಂದು ಹೇಳುವರೊ ಅವರನ್ನೆಲ್ಲ ಅಧೀರರರನ್ನಾಗಿಮಾಡುವ ಧೀರನನ್ನು ಕಂಡೆ. ಧೀರರ ಧೀರ .ಶೂರರ ಶೂರ ಗರುವ ಚೆನ್ನಮಲ್ಲಿಕಾರ್ಜುನ, ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ ಪರಮಗುರು ಚೆನ್ನಮಲ್ಲಿಕಾರ್ಜುನನ ಕಂಡು ಬದುಕಿದೆನು.ಈ ಜಗತ್ತು ಯಾವ ಶಕ್ತಿಯ ಬಲದಿಂದ ನಡೆದಿದೆಯೊ ಆ ಅದಿಶಕ್ತಿಯೊಳು ನಲಿದಾಡುವ ಗುರು,ಗರುವ ಚೆನ್ನಮಲ್ಲಿಕಾರ್ಜುನನನ್ನು ಕಂಡೆ. ಪರಮಗುರುವೀತ. ಜಗವ ಬೆಳಗುವನೀತ. ಈತನ ಕಂಡು ಬದುಕಿದೆ. ಜನ್ಮ ಸಾರ್ಥಕವಾಯಿತು. ಇನ್ನು ಧನ್ಯಳು. ಎಲ್ಲ ಜೀವ ಕೋಟಿಯೊಳು ಕೋಟಿಕೋಟಿ ರೂಪದಲ್ಲಿ ನಲಿದಾಡುವ ನೀತ. ಅಕ್ಕಮಹಾದೇವಿಯವರು ಈ ಚೆನ್ನಮಲ್ಲಿಕಾರ್ಜುನನನ್ನು ಬಾಲ್ಯದಿಂದಲೂ ಕನಸಿನಲ್ಲಿ ಕಂಡಿದ್ದರು . ಶ್ರೀ ಶೈಲದ ತಪಸಿನಲ್ಲಿ ಕಂಡಿದ್ದರು. ಸಗುಣದ ಮಿತಿಗಳನ್ನು ಕಾಂಡಿದ್ದರು. ನಿರ್ಗುಣದ ಸ್ವರೂಪವನ್ನು ಅನುಭವಿಸಿದ್ದರು. ಸಗುಣ, ನಿರ್ಗುಣ ಪರಮತ್ಮನನ್ನು ದರ್ಶನ ಪಡೆದು ಆನಂದಿಸಿದ್ದರು. ಈಗ ಕದಳೀವನದಲ್ಲೂ ತೃಪ್ತಿಯಾಗುವಷ್ಟು ದರ್ಶನ ಪಡೆದರು ಕೃತಾರ್ಥತೆ ಅನುಭವಿಸಿದರು.

23). ಹಸಿವಾದರೆ ಭಿಕ್ಷಾನ್ನಗಳುಂಟು.
ತೃಷೆಯಾದರೆ ಕೆರೆ ಬಾವಿಗಳುಂಟು.
ಶಯನಕ್ಕೆ ಹಾಳು ದೇಗುಲಗಳುಂಟು.
ಚೆನ್ನಮಲ್ಲಿಕಾರ್ಜುನ ಆತ್ಮಸಂಗಾತಕ್ಕೆ ನೀ ಎನಗುಂಟು.

ಪದಗಳ ಅರ್ಥ

ತೃಷೆ-ಬಾಯಾರಿಕೆ,
ಶಯನ-ಹಾಸಿಗೆ, ಇಲ್ಲಿನಿದ್ರೆಗೆ ಆಶ್ರಯ ಸ್ಥಳ. ಮಲಗಲೊಂದು ಸ್ಥಳ.
ಹಾಳು-ಪಾಳುಬಿದ್ದ ಅಥವಾ ಹೊಸದಾಗಿ ಕಟ್ಟಿರುವ ಅನ್ನಛತ್ರಗಳು, ದೇವಾ ಲಯಗಳು.
ಅತ್ಮಸಂಗಾತ-ಆತ್ಮನ ಯೋಗಕ್ಷೇಮಕ್ಕೆ .

ವಚನದ ಅರ್ಥ

ಎಲ್ಲಿ ಉಣ್ಣುವೆ? ಎಲ್ಲಿ ನೀರು ಕುಡಿವೆ ? ಎಲ್ಲಿ ಮಲಗುವೆ? ತಂದೆ,ತಾಯಿ, ಬಂಧು, ಬಳಗ, ಗೆಳತಯರಾದಿಯಾಗಿ ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರ ಈ ವಚನ. ಉಡುತಡಿಯಿಂದ ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ, ವಿರಾಗಿಯಾಗಿ ನಿರ್ಗ ಮಿಸುತ್ತಿರುವ ಅಕ್ಕಮಹಾದೇವಿಯವರನ್ನು ಊರಿನ ಎಲ್ಲರು ತಡೆದು ಕೇಳಿದ್ದಾರೆ. ಬೇಡ ಹೋಗಬೇಡ . ಎಲ್ಲಿ ನಿನಗೆ ಊಟ.ವಸತಿ ಆಶ್ರಯ ಇತ್ಯಾದಿ ಪ್ರಶ್ನೆಗಳಿಗೆ ಈವಚನದಲ್ಲಿ ಉತ್ತರಿಸಿದ್ದಾರೆ. ಅಂತರಂಗದಲ್ಲಿ ಪರಮಾತ್ಮನನ್ನು ತುಂಬಿಕೊಂಡು ನಾಳೆಯ ಬಗೆಗೆ ಒಂದಿಷ್ಟೂ ವಿಚಾರಿಸದೆ ಹೊರಟಿದ್ದಾರೆ. ಹಸಿವೆಯಾದರೆ ಭಿಕ್ಷಬೇಡುತ್ತೇನೆ. ತೃಷೆಯಾದರೆ ಕೆರೆ, ಬಾವಿ, ಹಳ್ಳಗಳಿವೆ. ವಸತಿಗೆ ಹಾಳು ದೇವಾಲಯಗ ಳಿವೆ. ಇರುಳು ನನ್ನ ಸಂಗಾತಕ್ಕೆ ಚೆನ್ನಮಲ್ಲಿಕಾರ್ಜುನನಿದ್ದಾನೆ. ಎಷ್ಟು ಸರಳವಾಗಿ ಅವರ ಉತ್ತರ ಇದೆ. ಭಯ,ಕಳವಳ,ಚಿಂತೆ ಒಂದಿನಿತೂ ಇಲ್ಲ. ಹೊರಜಗತ್ತನ್ನೆ ನೋಡಿರದ, ವ್ಯವಹಾರವನ್ನೆ ತಿಳಿಯದ ಮುಗ್ದ ಮಹಾದೇವಿಯವರು ಸಮಸ್ಯೆಗಳ ಸಾಗರವಾದ ಹೊರಜಗತ್ತಿಗೆ ಒಬ್ಬರೆ ದುಮುಕಿದ್ದಾರೆ ಇನ್ನು ಮುಂದೆ ತಮ್ಮ ಎಲ್ಲ ಸಮಸ್ಯೆ ತಾವೆ ಬಗೆಹರಿಸಿ ಕೊಳ್ಳಬೇಕು. ಸ್ವಾತಂತ್ರ್ಯ ದೊರೆತ ಸಂಭ್ರಮದಲ್ಲಿ ಚೆನ್ನ ಮಲ್ಲಿಕಾರ್ಜುನನು ಸಿಕ್ಕೆ ಬಿಟ್ಟ ಎನ್ನುವ ಆತುರದಲ್ಲಿ ಅವರು ನಿರ್ಗಮಿಸುತ್ತಿದ್ದಾರೆ. ಅವರಿಗೆ ದೇಹದ ಅಗತ್ಯಗಳು ಒಂದೂ ಮುಖ್ಯವಲ್ಲ. ಚೆನ್ನಮಲ್ಲಿಕಾರ್ಜುನನೆ ಮುಖ್ಯ. ಅವನು ದೊರೆತರೆ ಎಲ್ಲ ಸಮಸ್ಯೆ ನೋಡಿಕೊಳ್ಳುತ್ತಾನೆ ಎಂಬ ನಿಶ್ಚಿಂತೆ ಅವರದು.ಈ ವಚನದಿಂದ ಅವರು ಎಷ್ಟು ಮುಗ್ದರಿದ್ದರು ಎಂದು ತಿಳಿಯುತ್ತದೆ.

24) ಹಾಲು ತುಪ್ಪವ ನುಂಗಿ ಬೇರಾಗ ಬಲ್ಲುದೆ? ಸೂರ್ಯ ಕಾಂತದ ಅಗ್ನಿಯನಾರು ಭೇದಿಸಬಲ್ಲರು? ಅಪಾರಮಹಿಮ ಚೆನ್ನಮಲ್ಲಿಕಾರ್ಜುನ ನೀನೆನ್ನೊಳಗಿಪ್ಪ ಪರಿಯ ಬೇರಿಲ್ಲದೆ ಕಂಡು ಕಣ್ದೆರೆದೆನು .

ಪದಗಳ ಅರ್ಥ

ನುಂಗಿ-ಇಂಬಿಟ್ಟುಕೊಂಡು, ಒಳಗಿಟ್ಟುಕೊಂಡು. ಸೂರ್ಯಕಾಂತ-ಸೂರಕಿರಣ.
ಬೇರಿಲ್ಲದೆ-ಅಭೇದ.

## ವಚನದ ಅರ್ಥ

ದೇವರ ವ್ಯಾಖ್ಯೆಯನ್ನು ಎರಡು ಉಪಮೆಗಳ ಮೂಲಕ ಹೇಳಿದ್ದಾರೆ. ಅನುಭಾವಕ್ಕೆ ಪದಾರ್ಪಣ ಮಾಡಿದ ಸಾಧಕನಿಗೆ, ದೇವರು, ಸಾಕ್ಷಾತ್ಕಾರಬಿಟ್ಟು ಇನ್ನೊಂದುವಿಚಾರ ತಲೆಗೆ ಹೋಗುವುದೇ ಇಲ್ಲ. ಮನಸ್ಸು ಇಂದ್ರಿಯಗಳ ತುಂಬ ದೇವರ ವಿಚಾರದ ಕಥೆಗಳೇ ತುಂಬಿರುತ್ತವೆ. ಪರಮಾತ್ಮನ ದರ್ಶನವಾದ ಸಾಧಕ ಆ ಪರಮಾತ್ಮನನ್ನು ಮತ್ತೆ ಮತ್ತೆ ವರ್ಣಿಸುತಾನೆ. ಮನದುಂಬಿ ಹಾಡುತ್ತಾನೆ. ತನ್ನ ತಿಳಿವಳಿಕೆಯನ್ನು ಭಾಷೆಯಲ್ಲಿ ವ್ಯಾಖ್ಯಾನಿಸಿ, ಹಾಡುವುದರ ಮೂಲಕ ಖಚಿತಮಾಡಿಕೊಳ್ಳುತ್ತಾನೆ. ಇಲ್ಲಾದರೂ ಅಕ್ಕಮಹಾದೇವಿಯವರು ಆ ದೊಡ್ಡ ದರ್ಶನಾನುಭವವನ್ನು ಮತ್ತೆ ಮತ್ತೆ ವ್ಯಾಖ್ಯಾನಿಸಿ ಉಪಮಿಸಿದ್ದಾರೆ. ಈ ಉಪಮೆಗಳು ಆ ದೊಡ್ಡ ವಸ್ತು ಬ್ರಹ್ಮವನ್ನು ಅತ್ಯಂತ ಸಮರ್ಥವಾಗಿ ವಿವರಿಸುತ್ತವೆ. ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೆ? ಹಾಲಿನಲ್ಲಿ ತುಪ್ಪ ಇದೆ. ತುಪ್ಪ ಇದ್ದರೂ ಅದು ಬೇರೆಯಾಗಿಲ್ಲ. ಹಾಲು ತುಪ್ಪ ಒಟ್ಟಿಗೆ ಇವೆ. ಹಾಲು, ತುಪ್ಪ ಬೇರೆ ಬೇರೆಯಾದ ಕಾಲಕ್ಕೆ ಹಾಲು ಹಾಲಾಗಿ ಉಳಿದಿರುವುದಿಲ್ಲ. ಹಾಲು ತುಪ್ಪದ ಸಂಬಂಧ ಹೋಗಿರುತ್ತದೆ. ತುಪ್ಪ ಪಡೆದುಕೊಳ್ಳಬೇಕಾದರೆ ಹಾಲು ಹಾಲಾಗಿ ಉಳಿಯುವುದಿಲ್ಲ. ಅದು ಮೊಸರು ಮಜ್ಜಿಗೆಯಾದಾಗಲೇ ತುಪ್ಪದ ಪೂರ್ವರೂಪ ಬೆಣ್ಣೆ ಪ್ರಕಟವಾಗುತ್ತದೆ. ಹಾಲಿನಲ್ಲಿರುವ ತುಪ್ಪ ಕಾಣದಿರುವಂತೆ ಹಾಲಿನ ತುಂಬವೂ ತುಪ್ಪ ತುಂಬಿಕೊಂಡಿರುವಂತೆ ದೇವರು ಈ ಜಗತ್ತಿನ ತುಂಬ ಅವ್ಯಕ್ತವಾಗಿ ತುಂಬಿದ್ದಾನೆ. ಹಾಲು ತುಪ್ಪವನ್ನೊಳಕೊಂಡು ಬೇರೆಯಾಗಿರಲು ಸಾದ್ಯವಿಲ್ಲದಂತೆ ಜಗತ್ತನ್ನೊಳಕೊಂಡ ಪರಮಾತ್ಮನು ಬೇರೆಯಾಗಿ ಇಲ್ಲ. ಆತ ಜಗವಾಗಲೂ ಬಲ್ಲ. ಜಗವಾಗದಿರಲೂ ಬಲ್ಲ.ಸೂರ್ಯಕಾಂತದ ಅಗ್ನಿಯನಾರು ಭೇಧಿಸಬಲ್ಲರು. ಸೂರ್ಯ, ಅಗ್ನಿ,ಉಷ್ಣತೆಯನ್ನು ದತ್ತವಾಗಿ ನೀಡಿದ ಆ ಬ್ರಹ್ಮವು ಸುಲಭದಲ್ಲಿ ತಿಳಿಯಲು ಅತೀತವಾದುದು. ಅದು ಉಪಮಿಸ ಅರದಷ್ಟು ದೊಡ್ಡದು. ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನ : ಪರಬ್ರಹ್ಮಕ್ಕೆ ಅಕ್ಕಮಹಾ ದೇವಿಯವರು ಅಪಾರಮಹಿಮ ಎಂಬ ಗುಣ ವಿಶೇಷದಿಂದ ಕರೆದಿದ್ದಾರೆ. ಬ್ರಹ್ಮದ ವೈಶಿಷ್ಟ್ಯ ಅನಂತ ಶಕ್ತಿಯನ್ನು ಅರಿಯುತ್ತ ಸಾಧನೆ ಮುಂದುವರಿಸಿದ್ದಾರೆ. ಇಂತಹ ಪರಬ್ರಹ್ಮವು ತಾನು ಸೃಷ್ಟಿಸಿದ ಸಕಲ ಜೀವಜಾಲದಲ್ಲಿ, ತನ್ನಲ್ಲಿಯೂ ತುಂಬಿಕೊಂಡಿರುವ ದರ್ಶನ ನಡೆಯುತ್ತ ತಮ್ಮ ಸಾಧನೆ ಮುಂದುವರಿಸಿದ್ದಾರೆ. ನೀನೆನ್ನೊಳಡಗಿಪ್ಪ ಪರಿಯ ಬೇರಿಲ್ಲದೆ

ಕಂಡು ಕಣ್ಣೆರೆದೆನು.: ನೀನು ನನ್ನಲ್ಲಿ ತೊಬಿಕೊಂಡಿರುವೆ. ಹೇಗೆ ? ಹಾಲಿನಲ್ಲಿ ತುಪ್ಪ ತುಂಬಿ ಕೊಂಡಿರುವಂತೆ.ಜಗತ್ತಿನ ತುಂಬ ಸೂರ್ಯನ ಉಷ್ಣತೆ ತುಂಬಿಕೊಂಡಿರುವಂತೆ, ನೀನು ನನ್ನಲ್ಲಿ ಆಡಗಿರುವೆ. ಆ ಪರಿಯನ್ನು ಅವರು ಸಾಧನಾ ಪಥದಲ್ಲಿ ಕಂಡರಿಸಿದ್ದಾರೆ. ಬೇರಿಲ್ಲದೆ ಕಂಡು ಕಣ್ಣೆರೆದೆನು. ಬೇರಿಲ್ಲದೆ ಎಂದರೆ ಜೀವ ಬ್ರಹ್ಮ ಎಂಬ ಭಿನ್ನ ಭೇದವಿಲ್ಲದೆ ಅಂದರೆ ಅಕ್ಕಮಹಾದೇವಿಯವರು ದೇಹಭಾವವನ್ನು ಮೀರಿ ಬ್ರಹ್ಮ ಭಾವದ ಎತ್ತರಕ್ಕೆ ಸಾಧನೆ ಮಾಡಿದ್ದಾರೆ. ಈ ದರ್ಶನದಲ್ಲಿ ಅನಂತವಾಗಿದ್ದು ನಂತರ ಸಮಾಧಿ ಭಾವದಿಂದ ಎಚ್ಚರಗೊಂಡಿದ್ದಾರೆ, ಈ ದರ್ಶನದಿಂದ  ಮೌನ, ಬೆರಗು, ಅನಂದ ಭಾವಗಳು ಅಕ್ಕಮಹಾದೇವಿಯವರಲ್ಲಿ ಆವರಿಸಿವೆ.

25) ಹರಿಯ ನುಂಗಿತ್ತು ಮಾಯೆ. ಆಜನ ನುಂಗಿತ್ತು ಮಾಯ.
ಇಂದ್ರನ ನುಂಗಿತ್ತು ಮಾಯೆ ಚಂದ್ರನ ನುಂಗಿತ್ತು ಮಾಯೆ.
ಬಲ್ಲೆನೆಂಬ ಬಲುಗೈಯರ ನುಂಗಿತ್ತು ಮಾಯೆ ಆರಿಯೆನೆಂಬ
ಅಜ್ಞಾನಿಗಳ ನುಂಗಿತ್ತು ಮಾಯೆ ಈರೇಳು
ಭುವನವನಾರಡಿಗೊಂಡಿತ್ತು ಮಾಯೆ
ಚೆನ್ನಮಲ್ಲಿಕಾರ್ಜುನಯ್ಯ ಎನ್ನ ಮಾಯೆಯ ಮಾಣಿಸಾ ಕರುಣಿ

## ವಚನದ ಅರ್ಥ

ಬಲುಗೈಯರ-ಮಹಾಜ್ಞಾನಿಗಳ,
ಈರೇಳುಭುವನ - ಹದಿನಾಲ್ಕು
ಲೋಕ .ಆರ ಡಿ-ಆರುಹೆಜ್ಜೆಗೆ ಮಿತಿಗೊಳಿಸಿ

## ವಚನದ ಅರ್ಥ

ಈ ವಚನದಲ್ಲಿ ಮಾಯಾಜಾಲ ಎಲ್ಲೆಡೆ ವ್ಯಾಪಿಸಿ ಜಗತ್ತನ್ನೇ ತನ್ನ ಮುಷ್ಟಿಯಲ್ಲಿ ರಿಸಿ ಕೊಂಡಿರುವುದನ್ನು ವಿವರಿಸಿದ್ದಾರೆ. ಲೋಕದಲ್ಲಿ ಮಾಯೆಯನ್ನು ಗೆದ್ದ ಧೀರರು ಯಾರೂ ಇಲ್ಲ.ಮಾಯೆ ಒಬ್ಬರನ್ನೂ ಬಿಟ್ಟಿಲ್ಲ. ಎಲ್ಲರೂ ಮಾಯೆಯ ಕಾಲಡಿಯಲ್ಲಿ ಬಿದ್ದು ಹೊರಳಾಡುವವರೇ. ಇದಕ್ಕೆ ಪುರಾಣಗಳ ಅನೇಕ ಕತೆಗಳನ್ನು ಉದಾಹರಣೆ ಯಾಗಿ ಕೊಟ್ಟಿದ್ದಾರೆ. ಹರಿಯೇ ಸರ್ವೋತ್ತಮ ಎಂದು ಹೇಳುತ್ತಾರೆ. ಆದರೆ ಆತ ಜನ್ಮ ಜನ್ಮದಲ್ಲಿ ಬಂದು ಪರಿಭವ ಪಟ್ಟನು.

ಭೃಗುಮಹಾಮುನಿಯ 'ಶಾಪಕ್ಕೆ ತುತ್ತಾ
ದನುಭೃಗುಮಹಾಮುನಿಯಲ್ಲಿ ಶಾಪವಮೋಚನೆ ಮಾಡೆಂದು
ಪರಿಪರಿಯಾಗಿ ಬೇಡಿದರೂ ಜಾಡಿಸಿ ಎದೆಗೆ ಒದ್ದನು ಕ್ಷಮಿಸಲಿಲ್ಲ.
ಇದನ್ನು ನೋಡಿದ ಪತ್ನಿಲಕ್ಷ್ಮಿದೂರ ಹೊರಟು ಹೋದಳು.
ಇಂತಹ ಪರಿಭವದ ಮಾಯಾವಶವಾದ ಕಥೆಗಳು ಅನೇಕ ಇವೆ.
ಬ್ರಹ್ಮನಂತೂ ನಾಲ್ಕನೆಯ ತಲೆ ಕಳೆದುಕೊಂಡು ಮೂದಲೆಯಾದ.
ಇಂದ್ರನಂತೂ ತನ್ನ ಸಿಂಹಾಸನಕ್ಕಾಗಿ ಯಾವಾಗಲೂ
ಕಳವಳಪಡುವುದು. ಅಹಲ್ಯ ಇಂದ್ರ ಕಥೆ ಜನಜನಿತ ಮೈಯ್ಯಲ್ಲ
ಕಣ್ಣಾದ ಕಥೆ ಒಂದೆ ಎರಡೆ? ಚಂದ್ರ ಗುರು ಪತ್ನಿಗಮನ. ಆತನ
ಅವಾಂತರಗಳು ಬಹಳ. ಇನ್ನು ಉಳಿದವರು ಮಾಯೆಗೆ ಯಾವ
ಲೆಕ್ಕ?ನಾನು ಮಹಾಜ್ಞಾನಿ, ಶಕ್ತಿವಂತ, ಮಹಾತಪಸ್ವಿ ದೇವರ್ಷಿ
ಎನ್ನುವವರನ್ನೂ ಮಾಯೆ ಹಿಡಿಯಿತು. ನಾನು ಅಜ್ಞಾನಿ
ಎನ್ನುವವರನ್ನೂ ಮಾಯೆ ಹಿಡಿಯಿತು. ಹದಿನಾಲ್ಕು
ಲೋಕಗಳನ್ನೆಲ್ಲ ಮಾಯೆ ನಾಲ್ಕು ಹೆಜ್ಜೆಯಲ್ಲಿ ಹಿಡಿಯಿತು. ಅಂದ
ಮೇಲೆ ನಾನುಎಷ್ಟರವಳು?ನಾನು ಮಾಯಾವಶವಾಗುವುದರಲ್ಲಿ
ಆಶ್ಚರ್ಯ್ಯವಿಲ್ಲ.
ಚೆನ್ನಮಲ್ಲಿಕಾರ್ಜುನನೆ ಈಮಾಯೆಯನ್ನು ಬಿಡಿಸು.
ನಿನ್ನ ಅನುಗ್ರಹ ನನಗೆ ಬರಲಿ.